ಶ್ರೀ ಎಂ. ಶಿವಣ್ಣ (ಆರ್ಥಿಕ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ಪರವಾಗಿ 4 ಜನ ಮಂತ್ರಿಗಳು ಇಲ್ಲಿ ಇದ್ದೇವೆ. ಮಾನ್ಯ ಸದಸ್ಯರುಗಳು ಮಾತನಾಡಿದರೆ ಉತ್ತರ ಸಿಗುವಂಥದ್ದು ಆಗುತ್ತದೆಯಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ (ಕುದುವನಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಇದುವರೆಗೆ ಇವರು ಎಲ್ಲಿ ಹೋಗಿದ್ದರು. ಈಗ ಹೊರಗಿನಿಂದ ಇಲ್ಲಿಗೆ ಬಂದು ಮಾತನಾಡುತ್ತಿದ್ದಾರೆ. ನಾವು ಇಲ್ಲಿ ಇಷ್ಟೆಲ್ಲಾ ಏಕೆ ಕೇಳುವುದೆಂದರೆ, ಅವರೆಲ್ಲರೂ ಸದನದಲ್ಲಿ ಕುಳಿತಿದ್ದರೆ ಸ್ಫೂರ್ತಿ ಬರುತ್ತದೆ. ನಾವೆಲ್ಲಾ ರಾಜಕಾರಣಿಗಳು. ಸಣ್ಣ ಸಭೆಯಾದರೆ ನಾವು ಜಾಸ್ತಿ ಮಾತನಾಡುವುದಿಲ್ಲ. ದೊಡ್ಡ ಸಭೆಯಾದರೆ ಜಾಸ್ತಿ ಮಾತನಾಡುತ್ತೇವೆ. ಹಾಗಾಗಿ ಇಲ್ಲಿ ಸ್ಫೂರ್ತಿ ಬರಬೇಕಾದರೆ ಎಲ್ಲಾ ಸಚಿವರುಗಳು ಬಂದು ಸದನದಲ್ಲಿ ಕುಳಿತುಕೊಳ್ಳಬೇಕು.

ಉಪಾಧ್ಯಕ್ಷರು: ತಾವು ಇಲ್ಲಿಯವರೆಗೆ ಮಾತನಾಡಿದ್ದೀರಲ್ಲಾ, ನಾಳೆ ಅದು ಪತ್ರಿಕೆಯಲ್ಲಿ ಬಂದಾಗ ನಾಳೆಯ ದಿವಸ ಸದನಕ್ಕೆ ಜಾಸ್ತಿ ಜನ ಮಂತ್ರಿಗಳು ಬರುತ್ತಾರೆ ಬಿಡಿ. ಈಗ ಕಾರ್ಯದರ್ಶಿಗಳವರಿಂದ ವರದಿ ಮಂಡನೆ.

8. ಕಾರ್ಯದರ್ಶಿಯವರ ವರದಿ:

ಕಾರ್ಯದರ್ಶಿ: ಸನ್ಮಾನ್ಯ ಉಪಾಧ್ಯಕ್ಷರೆ, ವಿಧಾನಪರಿಷತ್ತಿನಿಂದ ತಿದ್ದುಪಡಿಯೊಂದಿಗೆ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ನಮ್ಮ ಕಡೆಯಿಂದ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದವರು ಶ್ರೀ ಸದಾನಂದ ಗೌಡ ಒಬ್ಬರು ಮಾತ್ರ. ಬೇರೆಯವರಿಗೆ ಅವಕಾಶ ಇಲ್ಲದ ಹಾಗೆ ಮಾಡುವುದು ಬೇಡ. ಕೊನೆಯ ಪಕ್ಷ ಪ್ರಪೋಷನ್‌ನೇಟ್ ಆಧಾರದ ಮೇಲೆ ಆದರೂ ಅವಕಾಶ ಕೊಡಬೇಕು.

ಉಪಾಧ್ಯಕ್ಷರು: ಯಾರ್ಯಾರು ಮಾತನಾಡಬೇಕೆಂದು ನೀವು ಬರೆದುಕೊಟ್ಟಿರುವ ಪ್ರತಿ ನನಗೆ ಸಿಕ್ಕಿದೆ. ಹಾಗೆಯೇ ಅವರಿಗೂ ಅವಕಾಶ ಕೊಡುತ್ತೇನೆ. ಈಗ ಪ್ರಪೋಷನ್‌ನೇಟ್ ಮೇಲೆ ಆಡಳಿತ ಪಕ್ಷದವರಿಗೆ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್: ನಿಜವಾಗಿ ಹೇಳುವುದಾದರೆ ಆಡಳಿತ ಪಕ್ಷದವರು ಕಡಿಮೆ ಸಮಯ ಮಾತನಾಡಬೇಕು. ಅವರು ಏನು ಮಾತನಾಡುವುದು ಇರುತ್ತದೆ? ನಾವು ಇಲ್ಲಿ ಹೇಳುವುದು, ಮಾತನಾಡುವುದು ಬಹಳ ಇರುತ್ತದೆ.

ಉಪಾಧ್ಯಕ್ಷರು: ನೀವು ಕೊಟ್ಟ ಪಟ್ಟಿ ಇಟ್ಟುಕೊಂಡು ಅವರೆಲ್ಲರಿಗೆ ಅವಕಾಶ ಕೊಡುತ್ತೇನೆ. ನೀವು ಕೊಟ್ಟಿರುವ ಪಟ್ಟಿಯಲ್ಲಿ 4 ಜನರ ಹೆಸರು ಇದೆ. ಅವರೆಲ್ಲರಿಗೆ ನಾನು ಮಾತನಾಡಲು ಅವಕಾಶ ಕೊಡುತ್ತೇನೆ. ಈಗ ಶ್ರೀ ಯಾಸೀನ್ ಅವರು ಮಾತನಾಡಲಿ.

9. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

+SRI SYED YASIN: (Raichur): Mr. Speaker, Sir, Thanks for you for giving me the opportunity to speak over the Governor's Address. Thanks to her Excellency, the Governor of Karnataka, for her fair address

last month on 15th. Out Government is firm on the commitment and conviction to improve the essential areas like Agriculture, Horticulture Animal Husbandry, Fisheries, drinking Water, Health, Education, Social Welfare and Rural Development. Of course, these commitments should be target oriented, within the stipulated time. It should be time bound. We spend crores of rupees for socio-economic and educational development in the State, and also spending crores of rupees on every section of the population. But unfortunately the poverty remains the same. Their housing conditions are same, and poor people are still living in slum areas. Their condition of nutrition, and health remains the same. Therefore, the Government should have a particular methodology to ensure that our schemes and programmes are directly reach the poor people. The Government should change the socio-economic attitude, for the poor people. So, our schemes should touch poverty alleviation Otherwise it will become a futile exercise. usually our development and socio-economic and educational mobility remain horizontal. We should have methodology to grow in a vertical fashion and in an elevated fashion. It should be result oriented and time bound. Themost important thing that was mentioned in the speech was that our "Government is determined to maintain the rule of law and peace'. It is certainly possible. because of our stable Government, because of our stable structure in the House, with he reasonable Opposition and also because of our stable Chief Minister. I welcome the Governments' Commitment to democratic decentralisation. but more funds are required and more powers are required for Grama Panchayat, Taluk Panchayat and Zilla Panchayat. Then only we will be able to deliver goods. Of course, our Honb'e Chief Minister has doubled the funds for the Grama Panchayat. So, naturally we will be able to give more development results. I feel proud when Her Excellency the Governor menioned that the State Government has got eminent position in the field of Horticulture and ample results we have given in Horticulture as well as in Floriculture in the State. So. there should be some programme for unemployed graduates and unemployed youth to develop the barren lands. Therefore, we should have a good system of land distribution-barren land should be given to our unemployed youth so that they can cultivate with the help of loan facilities from the Banks and Finance Corporations.

Regarding Fisheries, apart from marine Fish production, development of inland fisheries is very essential and the Government has given priority. We have over five lakh hectares of inland water resources in the form of tanks and reservoirs which could be utilised for the inland fisheries. We have reservoirs, rivers and backwaters. But sometimes we have forgotten dam backwaters, which is a perennial resource for the Fisheries as well as for the rehabilitation of rural youth. For example in Raichur, Zurala and Krishna Backwaters are available. More than one crore of rupees has been sanctioned for the housing for Fishermen by the last Government. Fishermen are there, but, fishermenship is not there. We must give priority to this area where the backwater exist. Fishermen should be given boats, nets and other facilities to develop fisheries in these areas. With the help of inland fisheries, we should give some socio-economic touch to the poor people in the villages.

With regard to raw silk production in Karnataka, we have achieved 8,944 metric tonnes last year, which is a record. It means we are contributing nearly 63% of the total production of raw silk to the country. It means our State is number one in the country in the sericulture sector. It shows that we are having potential skills and the silk production as a traditional stock. We should not forget this. Sericulture has been neglected by policies. Facilities should be given to the poor people in Sericulture, because we have already started achieving our targets in this field, and we are contributing nearly 63% of the total production. When we have skill, when we have this tradition for sericulture in our country, we can achieve our target more this time. If the Government and the Ministry makes up the mind, I think we can produce raw silk upto 80% of the total requirement of the country.

Actually sericulture should be our optional subject in the State, because it gives economic viability and earnings in foreign exchange. it promotes the weaker sections in the villages. So we must give more priority to this sector. It has been noted three million people are living on the sericulture. if you develop facilities, we can generate more employment opportunities in this field. So Sericulture sector should be given more priority because itt is considered to be cash crop.

With regard to Education, her Excellency the Governor in *this* Address has mentioned 11,000 more class rooms to be given, 75,00

more primary school teachers, with the ratio of 1:40. Sir, I am sorry to state that there are some areas in the State, where illiteracy percentage is very high. For Example, Raichur, Gulbarga, Bidar such places have been neglected. Sofar, Raichur has got a remarkable place. Kolar comes first in illiteracy in the State. Second comes Raichur, But at the time of distribution of funds through the Education Minister of through the Government, as a matter of fact, any Government when they have declared 11,000 more class rooms and 75.00 more primary school teachers the Government should ensure that funds are properly distributed. These things should reach the areas where the illieracy rate is high. With regard to SC/ST and Backward Classes and Minorities socio-economic development, our Government is committed fairly to the welfare of SC/ Sts backward classes minorities and people belonging to economically weaker sections. But they are facing lot of problems. At the same time, our Government is committed for the welfare of SC/ST, backward classes, minorities and economically weaker sections including backward communities. Our Government has therefore mentioned for the Qualitative improvement. Sir, there are two things. One is non-material culture and the other is material culture. By introducing loan system through agencies like SC/ST Development Corporation, Minorities Development Corporation, Backward Classes Development Corporation, Directorate of Backward Classes and Minorities, Social Welfare Department, we have plenty of departments to motiviate these weaker sections for the economic development. But the qualitative improvement will come not through loans but through facilities. We must give importance for qualitative improvementt thereby we will be doing great favour to the weaker sections. We are also generating quality and educated class in our population. So to bring qualitative improvement, more funds must be given for their education, scholarship, books, stationery, hostel facilities and skill devleopment training schemes, job oriented and self improvement programmes. We must motivate both non-material and material cultures. Then only we can contribute. The population of minorities is lucrative. SC/ST population is lucrative, backward community population is lucrative. If you change the quality, if you motivate them towards education, ultimately it contributes to our Nation. With regard to Minority Development Corporation, SC/ST

Development Corporation, Backward Classes Development Corporation. loan applications in thousands are pending in the Banks. On the one side the R.B.I. direction enumerates that every bank in rural and urban area to have a fixed target to disburse the funds to the poorer sections. On the other side. Lead Bank Managers are there. Similarly thousands of applications are pending in every district. In spite of MLAs and Ministers are pursuing, the Banks are not coming forward to disburse the loan. I request that our Government must give directions to the Deputy Commissioners concerned and to the Chief Secretary to Government, to have frequent or quarterly meetings with the higher officials like Chairman, and ensure that they should enforce RBI direction, and that Banks should disburse amount and they should not keep pending the applications. The other problem is all poor people belonging to weaker sections; they go to the Bank and ask for loan of Rs. 10,000 and Rs. 5,000. Even for sanctioning Rs. 10,000 they are asking for Suresty. These poor people, they do not have any property. They all live in huts, alums and how can they produce documents of property? Who will give them surety? There is a RBI direction that upto Rs. 50,000 loan, belonging to SC/ST. minorities and weaker sections, execptions should be given to them and the Banks should not ask for surety. But the Bank Managers, in order to increase the recovery percentage, they are enforcing for sureties and going against the RBI direction. I urge upon the Government to act, and they should write to the Finance Minister in this regard. They should talk to the concerned Chairmen to give exemption for SC/ST and other Backward sections not to insist upon Surety. Because poor people cannot give surety at all. With regard to housing, the Government has promised to provide two lakh houses per year for the economically weaker sections. It is a very good idea, Hon'ble Chief Minister is also very keen about housing programme. Even they have introduced Rajiv Gandhi Housing Corporation to help the rural people and people belonging to weaker sections. Sir, you remember the socio-economic and educational survey made by the Minority Commission in the name of High Power Committee under the Chairmanship of Mr. Rehman Khan. And that report has been submitted to the Government of Karnataka when Mr. Devegowda was the Chief Minister. it is still pending. Fortunately now we have come to power; now our Government should take care of

that pending report. They have conducted the survey regarding minorities, most of the minorities and backward classes are living in the slums. Therefore, they should be given more priority. They should fix the percentage of share at the time of distribution, particularly to the minorities considering the socio-economic and education survey made by the Minorities Commission.

With regard to power sector, our Hon'ble Chief Minister has taken a very good step. He made the new methodology for transformation and equal distribution of electricity. Sir, recently they have imposed some restrictions to flour mills and rice mills. The Government is forcing them to convert from Low Tension to High Tension. For a small scale industry, to convert it from low to high tension, it requires about 4 to 5 lakhs. All small scale industries, are already involved in financial crisis; financial management is not there, market is not there. They are getting sick. At this juncture, we should not impose this kind of restriction. So I request the Government to give them relaxation from the above rule and they must allow low tension system like earlier. I wish to bring to the notice of the Government that the Electricity Department is humiliating the people in the villages. Now our Hon'ble Chief Minister has given directions to the Electricity Department not to enforce for the recovery of bills from the poor people. In spite of the directions, in some villages, they are humiliating the people and disconnecting power. So there should be another order directing the Department not to humiliate the poor people. They should recover money in instalments. They should not humiliate the farmers and poor people in the villages. Our Government is committed to the growth and rehabilitation of Industries. Sir, I request the Government to encourage those areas and rehabilitate and encourage industries, whether it is Government or Private investment and our Government has now given the new concept of private investment. So we should mark out the areas, where the water, electricity, broad guage, environment is there, such area should be developed. For example, Raichur. That comes under Industrial Growth Centre. We have spent crores of rupees for layout and all, but so far no industries have come up. So I request our Government to give directions to our Hon'ble Industry Minister to push some private investors to stabilise the industry, and some agrobased industries, so that they can provide employment

opportunities in this area. Raichur is an industrial area. We have acquired two thousand acres. The Government has already paid the money. Crores of money is invested. They have formed a beautiful layout. Broadguage railline is there, thermal plant is there. Thanks to our Hon'ble Chief Minister, who recently has given VII Unit of Raichur Thermal Power Station. Uninterrupted electricity is now available in Raichur. Krishna Water is there and is serving as Perennial resource. All the time you will get water. With all these facilities, it is possible to push the private investore to such areas. Similarly in other Districts also, the same environment is there. So the backward areas should be given more priority. With regard to facilities for the Information Technology, Karnataka is the Pioneer in Information Technology. We have got strong roots and strong tradition of information technology. So naturally any technology has to transfer, has to go to neighbouring States and from State to State, but our roots are with us. Whatever technology we develop it is going to other State. It is a very natural phenmenon. It should go. They also should get benefit. They should also get ideas from our Government. They should develop this technology. Ultimately, it contributes to our country. So I must congratulate our Hon'ble Chief Minister for having given special attention to the Information Technology and for having promised to give some Centres to every District of our State. I hope shortly we will be getting to every department this Internet System and Computer System. Her Excellency the Governor mentioned in the last paragraph, the concept of governance has been gradually transferred, the commencement of millenium, the role of Government is being defined as a catalyst of change and progress. In the Governor's address it has been mentioned that governance has become a participatory institution in which the humblest citizen has a voice. Certainly our Government is an institution. We have got a charter. We have got priorities. We have got material apparatus. We have got a system. We have got bureaucracy. We have got Ministers. We have got different departments, we have got structures, functions and activities, but my request is to have one charter, i.e., poverty alleviation. And number two we should help SC/ST, weaker sections and also the Minorities in the State, for which we needs the dedication and commitment. For that we need, norms, values, ideologies, right role, fair duties, honesty, sincerity and fair deddication and

commitment. So, thank you very much. Mr. Speaker Sir, You have given me the opportunity to speak on the Motion of Thanks to Governor's Address. I have given some suggestions to the Government through this August House. With these words, I conclude. Thank you very much.

+ ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ): ಮಾನ್ಯ ಉಪಾಧ್ಯಕ್ಷರೇ, ತಾವು ಮಾನ್ಯ ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಮೇಲೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದಕ್ಕಾಗಿ ತಮಗೆ ವಂದಿಸುತ್ತಾ ರಾಜ್ಯಪಾಲರು ತಮ್ಮ ಭಾಷಣವನ್ನು ಕನ್ನಡದಲ್ಲಿ ಓದಿದರು. ಇದು ಕರ್ನಾಟಕದ ಜನತೆಗೆ ಬಹಳ ಸಂತೋಷದ ವಿಚಾರವಾಗಿದೆ. ಈ ರಾಜ್ಯಪಾಲನ ಭಾಷಣದಲ್ಲಿ ಏನೊಂದು ಗೊತ್ತುಗುರಿಯಿಲ್ಲ ಎಂದು ಹೇಳಿದರೂ ಕೂಡ ತಪ್ಪಾಗಲಾರದು. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ಕುಡಿಯುವ ನೀರು, ಆರೋಗ್ಯ, ಶಿಕ್ಷಣ, ಸಮಾಜಕಲ್ಯಾಣ, ಮತ್ತು ಗ್ರಾಮೀಣಾಭಿವೃದ್ಧಿಯಂತಹ ಅವಶ್ಯಕ ವಲಯಗಳ ಸುಧಾರಣೆಗೆ ಆದ್ಯತೆಯನ್ನು ನೀಡಲಾಗುವುದು ಎಂದು ಹೇಳಿದ್ದಾರೆ. ಆದರೆ ಬಜೆಟ್‌ನ್ನು ನೋಡಿದಾಗ ಕೇವಲ ಗ್ರಾಮೀಣಾಭಿವೃದ್ಧಿಗೆ 3.94 ಪರ್ಸೆಂಟ್‌ನ್ನು ಮೀಸಲಾಗಿಡಲಾಗಿದೆ. ಅದೇ ರೀತಿಯಾಗಿ ಕೃಷಿಗೆ 4.31 ಪರ್ಸೆಂಟ್‌ನ್ನು ಹಣವನ್ನು ಮುಡಿಪಾಗಿಟ್ಟಿದ್ದಾರೆ. ಆರೋಗ್ಯಕ್ಕೆ 3.10 ಪರ್ಸೆಂಟ್‌ನ್ನು, ನೀರಾವರಿ ಸುಮಾರು 39.58 ಪರ್ಸೆಂಟ್ ಮುಡಿಪಾಗಿಟ್ಟಿದ್ದಾರೆ. ಕೃಷಿಗೆ ಇಷ್ಟು ಹಣವನ್ನು ಇಟ್ಟಾಗ ಇದನ್ನು ಹೇಗೆ ಆದ್ಯತೆಯ ಮೇಲೆ ಮುಂದಕ್ಕೆ ತರುವುದಕ್ಕಾಗುತ್ತದೆ, ಇವತ್ತು ಕರ್ನಾಟಕ ಕೃಷಿಯನ್ನೇ ಅವಲಂಬಿಸಿರುವಂತಹ ರಾಜ್ಯವಾಗಿದೆ. ಈ ರಾಜ್ಯದಲ್ಲಿ ಕೃಷಿಗೆ ಹೆಚ್ಚು ಹಣವನ್ನು ಮುಡಿಪಾಗಿಡದೆ, ತಾವು ಈ ರಾಜ್ಯಪಾಲರ ಭಾಷಣದಲ್ಲಿ ಆದ್ಯತೆಯನ್ನು ಕೊಡುತ್ತೇವೆಂಬ ಮಾತನ್ನು ಆಡಿ, ಅದನ್ನು ಕೈಬಿಡುವುದು ಸರಿಯಿಲ್ಲ. ತೋಟಗಾರಿಕೆಯಲ್ಲಿ ಕೊಡಗಿಗೆ ಸಂಬಂಧಪಟ್ಟಂತಹ ವಿಚಾರವನ್ನು ನಾನು ಹೇಳಬಯಸುತ್ತೇನೆ. ಸನ್ಮಾನ್ಯ ತೋಟಗಾರಿಕಾ ಮಂತ್ರಿಗಳು ಈ ಸದನದಲ್ಲಿ ಕಾಣುವುದಿಲ್ಲ. ನಾನು ಮಾತನಾಡಿದಕ್ಕೆ ಉತ್ತರ ಸಿಗುತ್ತದೋ ಇಲ್ಲವೋ ಎಂದು ನನಗನಿಸುತ್ತದೆ. ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಹಿರಿಯ ಸಚಿವರು, ಅವರು ವಿರೋಧಪಕ್ಷದಲ್ಲಿದ್ದಾಗ ಪ್ರತಿ ದಿನ ಹೇಳುತ್ತಿದ್ದರು, ಏನು ಮಂತ್ರಿಗಳು ಸದನದಲ್ಲಿ ಕಾಣುವುದಿಲ್ಲ, ಅವರು ಎಲ್ಲಿ ಹೋಗಿದ್ದಾರೆ, ಏನು ಎಂದು ಕೇಳುತ್ತಿದ್ದರು. ಇವತ್ತು, ಪಾಪ ಅವರು ಅದೇ ಸ್ಥಿತಿಗೆ ಬಂದಿದ್ದಾರೆ, ನಾವು ಗೋಡೆಗೆ ಭಾಷಣ ಮಾಡುವುದು ಆಗಬಾರದು. ದಯವಿಟ್ಟು ಉತ್ತರವನ್ನಾದರೂ ಒದಗಿಸುವಂತಹ ಕೆಲಸವಾಗಬೇಕೆಂದು ನಾನು ಹಿರಿಯ ಸಚಿವರಲ್ಲಿ ಕೇಳುತ್ತೇನೆ. ನಮ್ಮ ಕೊಡಗಿನಲ್ಲಿ ತೋಟಗಾರಿಕೆಗೆ ಸುಮಾರು 3 ಸಾವಿರ ಎಕರೆ ಜಾಗವಿದೆ. ಅದರಲ್ಲಿ ಮಾದಾಪುರದಲ್ಲಿ ಸುಮಾರು 250 ಎಕರೆ ಜಾಗವನ್ನು ತೋಟಗಾರಿಕೆಗೆ ಮುಡುಪಾಗಿಟ್ಟಿದ್ದಾರೆ. ಆ ತೋಟಗಾರಿಕೆಯಲ್ಲಿ ಕೇವಲ 60 ಎಕರೆಯಲ್ಲಿ ಮಾತ್ರ ಸಪೋಟ ಮತ್ತು ಮಾವಿನಕಾಯಿಯನ್ನು ಬೆಳೆಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಬಾಕಿಯಿರುವಂತಹ 190 ಎಕರೆಯ ಜಾಗವು ಕಾಡಾಗಿ ಕಾಡುಹಂದಿಗಳು ತುಂಬಿ, ರೈತರ ಬೆಳೆಯನ್ನು ನಾಶಮಾಡುವಂತಹ ಕೆಲಸವು ಕೂಡ ಆಗುತ್ತಿದೆ. ಇದರಿಂದಾಗಿ ಯಾವುದೇ ಪ್ರಯೋಜನವು ಸಹ ಆಗುತ್ತಿಲ್ಲ. ಅಲ್ಲಿ ಅಧಿಕಾರಿಗಳಿಗೆ ಕೊಡುವಂತಹ ಸಂಬಳಕ್ಕಿಂತ 20 ಪರ್ಸೆಂಟ್ ಕಡಿಮೆ ಹಣವನ್ನು ಅಭಿವೃದ್ಧಿಗೆ ತೊಡಗಿಸುತ್ತಿದ್ದಾರೆ. ಈಗ ಆ ಜಾಗವು ತೋಟಗಾರಿಕೆಗೆ ಬೇಕೆ ಎಂಬ ಪ್ರಶ್ನೆ ನನ್ನದಾಗಿದೆ. ತಾವು

ಆಗಲಿಲ್ಲವೆಂದರೆ ಈ ತೋಟಗಾರಿಕೆಯಲ್ಲಿ ಬಾಕಿಯಿರುವಂತಹ ಜಾಗವನ್ನು ಯಾರಾದರೂ ಖಾಸಗಿಯವರಿಗೆ ಲೀಸ್‌ಗೆ ಕೊಟ್ಟರೆ ಅದರಲ್ಲಾದರೂ ಉತ್ಪತ್ತಿ ಬರಬಹುದು, ಸರ್ಕಾರಕ್ಕೆ ಆ ಉತ್ಪತ್ತಿಯು ಕೂಡ ಆಗುತ್ತದೆ. ಅದರ ಜೊತೆಗೆ ನೀವೇನು 60 ಎಕರೆಯ ಜಾಗವನ್ನು ಮಾದಾಪುರದಲ್ಲಿ ಮಾಡುತ್ತಿದ್ದೀರಿ. ಅದನ್ನು ರಿಸರ್ಚ್‌ಗೆಂದು ಇಟ್ಟುಕೊಂಡು, ಬಾಕಿಯಿರುವಂತಹ ತೋಟಗಾರಿಕೆಯನ್ನು ನೀವು ಲೀಸಾಗಿ ಕೊಟ್ಟರೆ ಸರ್ಕಾರಕ್ಕೆ ಇದರಿಂದ ಉತ್ಪತ್ತಿಯು ಬರುತ್ತದೆ. ಆ ಕೆಲಸವನ್ನು ಇಡೀ ಕರ್ನಾಟಕದಲ್ಲಿ ಮಾಡಿದರೂ ಕೂಡ ಸುಮಾರು 10 ಕೋಟಿ ರೂಪಾಯಿಗಳಷ್ಟು ಆದಾಯವು ಸರ್ಕಾರಕ್ಕೆ ಬರಬಹುದು. ಅದನ್ನು ತಾವು ಮಾಡುವುದು ಉಚಿತವೆಂದು ನಾನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಜಾತಿ ಮತ್ತು ಪಂಗಡಗಳ ಸೌಹಾರ್ದಯುತವಾದ ರೀತಿಯಲ್ಲಿ ನೆಲೆವೀಡಾಗಿದೆ. ಸಾಮಾಜಿಕ ಶಾಂತಿಯನ್ನು ಕದಡುವ ಘಟನೆಯು ಸಂಭವಿಸುತ್ತದೆ. ಅಲ್ಲಲ್ಲಿ ಕಾನೂನು ಶಾಂತಿ ಪಾಲನೆಗೆ ಬದ್ಧವಾಗಿದೆ. ಕಾನೂನು ಮತ್ತು ಸುವ್ಯವಸ್ಥೆ ಧಕ್ಕೆ ಉಂಟುಮಾಡುವ ಯಾವುದೇ ಯತ್ನದ ವಿರುದ್ಧ ಕಠಿಣ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ನಾನು ಸನ್ಮಾನ್ಯ ಗೃಹಮಂತ್ರಿಗಳನ್ನು ಒಂದು ಪ್ರಶ್ನೆಯನ್ನು ಕೇಳಿದೆ. ಅದಕ್ಕೆ ಅವರು ಉತ್ತರವನ್ನು ಸಹ ಕೊಟ್ಟಿದ್ದಾರೆ. ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ: 311ರಲ್ಲಿ ಕೇಳಿದ್ದೆ. 1997ರಲ್ಲಿ ಎಷ್ಟು ಕೊಲೆಗಳಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದೆ. 1672 ಕೊಲೆಗಳು ಆಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. 1998ರಲ್ಲಿ 1963, 1999ರಲ್ಲಿ 1651, 2000ನೇ ಇಸವಿಯಲ್ಲಿ ಎಷ್ಟು ಕೊಲೆಗಳಾಗಿವೆ ಎಂದು ಕೇಳಿದ್ದಕ್ಕೆ 29-2-2000ಕ್ಕೆ ಸುಮಾರು 283 ಕೊಲೆಗಳಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದರಿಂದ ಇವರು ಯಾವ ರೀತಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುತ್ತಾರೆ ಎಂದು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಈ ಎರಡು ತಿಂಗಳುಗಳಲ್ಲಿ 283 ಕೊಲೆಗಳಾದರೆ, ಇನ್ನು ಬಾಕಿ 10 ತಿಂಗಳುಗಳಿಗೆ ಇದೇ ರೀತಿಯಾಗಿ ಹೋದರೆ 3163 ಕೊಲೆಗಳಾಗುತ್ತವೆ. ಅದೇ ರೀತಿಯಾಗಿ ಸುಲಿಗೆಗಳ ಬಗ್ಗೆ ಹೇಳುವುದಾದರೆ, 1997ರಲ್ಲಿ 1199 ಸುಲಿಗೆಗಳಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. 1998 ರಲ್ಲಿ 1206, 1999 ರಲ್ಲಿ-1023, ಈ ಎರಡು ತಿಂಗಳುಗಳಲ್ಲಿ ಸುಮಾರು 141 ಸುಲಿಗೆಗಳು ಪ್ರಕರಣಗಳು ಆಗಿದೆ. ಅಪರಾಧದ ಕೇಸನ್ನು ದಾಖಲಾತಿ ಮಾಡಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದೀರಿ. ಇದು ಕೂಡ ಇದೇ ರೀತಿಯಾಗಿ ಮುಂದುವರಿದರೆ ಸುಮಾರು 1551 ಸುಲಿಗೆ ಕೇಸುಗಳು ಈ ರಾಜ್ಯದಲ್ಲಿ ದಾಖಲಾಗುತ್ತದೆ. ಇದರ ಜೊತೆಗೆ ಮನೆಗಳ್ಳತನ 1997ರಲ್ಲಿ ಸುಮಾರು 23396 ಮನೆಗಳ್ಳತನಗಳಾಗಿದೆ. 1998 ರಲ್ಲಿ 20947, 1999ರಲ್ಲಿ-19121, ಅದೇ ರೀತಿ 2000ನೇ ಇಸವಿಯಲ್ಲಿ 2 ತಿಂಗಳಿಗೆ 3351 ಮನೆಗಳ್ಳತನವಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದು ಕೂಡ ಅದೇ ರೀತಿಯಾಗಿ ಮುಂದುವರಿದರೆ ಈ ವರ್ಷ ಸುಮಾರು 36861 ಮನೆಗಳ್ಳತನಗಳು ನಡೆಯುತ್ತದೆ. ಇದು ಈ ಸರ್ಕಾರದ ಕಾನೂನಿನ ಸುವ್ಯವಸ್ಥೆಯಾಗಿದೆ. ಇವತ್ತು ಕಾನೂನು ಯಾವ ಸ್ಥಿತಿಗೆ ಹೋಗಿದೆ. ಈ ಕಾಂಗ್ರೆಸ್ ಸರ್ಕಾರದ ಅಧಿಕಾರಕ್ಕೆ ಬಂದ ನಂತರ ಈ ಕಳ್ಳರಲ್ಲಿಯೂ ಕೂಡ ಭಯದ ವಾತಾವರಣವಿಲ್ಲ. ಎಲ್ಲಿ ಹೋದರೂ ಸಹ ಹೆದ್ದಾರಿಯ ದರೋಡೆ, ಅತ್ಯಾಚಾರ, ಪರಿಶಿಷ್ಟ ಜಾತಿಯವರ ಮೇಲೆ ದೌರ್ಜನ್ಯ, ಇದು ಕೂಡ ಹೆಚ್ಚಾಗಿ ನಡೆಯುತ್ತಿದೆ. ಈಗ ಅತ್ಯಾಚಾರ ನಡೆದಿರುವಂತಹ ಕೇಸುಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. 1997ರಲ್ಲಿ 238, 1998ರಲ್ಲಿ-233, 1999ರಲ್ಲಿ-295, ಈಗ ಎರಡು ತಿಂಗಳುಗಳಲ್ಲಿ 36

ಅತ್ಯಾಚಾರದ ಕೇಸುಗಳು ದಾಖಲಾಗಿದೆ. ಇದು ಕೂಡ ಇದೇ ರೀತಿಯಾಗಿ ಮುಂದುವರಿದರೆ ಸುಮಾರು 396 ಅತ್ಯಾಚಾರದ ಕೇಸುಗಳು ದಾಖಲಾಗುತ್ತವೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಸಾಧಾರಣವಾಗಿ ಎಲ್ಲರೂ ಹೇಳುತ್ತಾರೆ. ಈ ದಲಿತರಿಗೆ ಬಹಳಷ್ಟು ಅವಕಾಶವನ್ನು ಕೊಡುತ್ತಾರೆ. ಪರಿಶಿಷ್ಟ ವರ್ಗದವರಿಗೆ ಅವಕಾಶವನ್ನು ಕೊಡುತ್ತೇವೆ. ರಕ್ಷಣೆಯನ್ನು ಕೊಡುತ್ತೇವೆ ಎಂದು ಹೇಳುವುದು ಬಾಯಿಯಲ್ಲಿ ಮಾತ್ರವೇ ಆಗಿದೆ. ಇದ್ಯಾವುದು ಕೂಡ ಕಾರ್ಯರೂಪಕ್ಕೆ ಬಂದಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗದವರ ಮೇಲೆ ನಡೆದಂತಹ ದೌರ್ಜನ್ಯದ ಕೇಸುಗಳು ದಾಖಲಾಗಿರುವ ಬಗ್ಗೆ ಈಗ ಹೇಳುತ್ತೇನೆ. 1997 ರಲ್ಲಿ-1252, 1998ರಲ್ಲಿ-1279, 1999 ರಲ್ಲಿ 1234 ಕೇಸುಗಳು ದಾಖಲಾಗಿವೆ. ಈ 2000ನೇ ಇಸವಿಯಲ್ಲಿ ಅಂದರೆ 2 ತಿಂಗಳುಗಳಲ್ಲಿ ಸುಮಾರು 239 ಕೇಸುಗಳು ದಾಖಲಾಗಿವೆ. ಇದು ಕೂಡ ಇದೇ ರೀತಿಯಾಗಿ ಮುಂದುವರೆದುಕೊಂಡು ಹೋದರೆ, ಈ ವರ್ಷ ಅಂದರೆ ಸುಮಾರು 2629 ಕೇಸುಗಳು ದಾಖಲಾಗುತ್ತವೆ. ಇದು ಕಾನೂನಿನ ಸುವ್ಯವಸ್ಥೆಯಾ? ಇದು ಕಾನೂನು ಮತ್ತು ಶಾಂತಿಪಾಲನೆಯ ಕ್ರಮವೇ? ಈ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ. ತಾವು ಇನ್ನಾದರೂ ಎಚ್ಚೆತ್ತುಕೊಳ್ಳದಿದ್ದರೆ ಅಥವಾ ಇದೇ ಸ್ಥಿತಿಯು ಮುಂದುವರಿದರೆ, ಇಲ್ಲಿ ಯಾರು ಕೂಡ ಮನೆಯನ್ನು ಬಿಟ್ಟು ಹೊರಗಡೆ ಹೋಗುವ ಪರಿಸ್ಥಿತಿ ಇರುವುದಿಲ್ಲ. ತಾವು ಕಾನೂನನ್ನು ಯಾವ ರೀತಿ ಕಾಪಾಡುತ್ತೀರಿ ಎಂದು ನನಗೆ ಅರ್ಥವಾಗುತ್ತಿಲ್ಲ. ಅದೇ ರೀತಿಯಾಗಿ ಕಾವೇರಿ ನ್ಯಾಯ ಮಂಡಲಿಯ ವಿಚಾರವನ್ನು ತಾವು ಹೇಳಿದ್ದೀರಿ. ಈ ಕಾವೇರಿ ತೀರದ ಸುತ್ತಮುತ್ತಲಿನ ಗ್ರಾಮಗಳಿಗೂ, ಕಣಿವೆಯಲ್ಲಿರತಕ್ಕಂತಹ ರೈತರ ಹಿತಾಸಕ್ತಿಯನ್ನು ಕಾಪಾಡಲು ನಮ್ಮ ಸರ್ಕಾರ ಬದ್ದವಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಕಾವೇರಿ ಉಗಮಸ್ಥಾನದ ಪರಿಸ್ಥಿತಿ ಇವತ್ತು ಏನಾಗಿದೆ ಎಂದರೆ ಬಹಳ ಚಿಂತಾಜನಕವಾಗಿದೆ. ನನಗೆ ಸನ್ಮಾನ್ಯ ಕೃಷ್ಣರವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಎಂದು ಹೇಳಿದಾಗ ತುಂಬಾ ಸಂತೋಷವಾಯಿತು. ಏಕೆಂದರೆ, ನಮ್ಮ ಆತ್ಮಾನಂದರವರು ನಾವು ಸಿಕ್ಕಿದ ಕೂಡಲೆ ಕೊಡಗಿನವರು ಅನ್ನದಾತರು ಎಂದು ಹೇಳುತ್ತಾರೆ. ನಮ್ಮ ಕಾವೇರಿ ನೀರು ಮಂಡ್ಯಕ್ಕೆ ಹೋಗುವುದರಿಂದ, ಅದರಲ್ಲೂ ಮಂಡ್ಯದವರೇ ಮುಖ್ಯಮಂತ್ರಿಯಾಗಿರುವುದರಿಂದ ನಮ್ಮ ಕೊಡಗಿನ ಮೇಲೆ ಕರುಣೆಯನ್ನು ತೋರಿಸಬಹುದು ಎಂದು ಹೇಳಿ ನಾನು ಸಂತೋಷವನ್ನು ಪಟ್ಟೆನು. ಆದರೆ ಪರಿಸ್ಥಿತಿ ಏನಾಗಿದೆ. ಕೊಡಗಿನ ವಿಚಾರದ ಬಗ್ಗೆ ಬಜೆಟ್‌ನಲ್ಲಿ ಮಂಡನೆ ಮಾಡಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿದ್ದರೆ ಬಹಳ ಒಳ್ಳೆಯದಾಗಿತ್ತು. ನನಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಮೇಲೆ ಅಪಾರವಾದ ಗೌರವವಿದೆ. ಅವರು ಬಹಳ ವಿದ್ಯಾವಂತರು, ಬುದ್ದಿವಂತರು, ಮೇಧಾವಿಗಳು, ನನ್ನ ವಯಸ್ಸಿನಷ್ಟು ಅವರು ರಾಜಕೀಯದಲ್ಲಿ ನುರಿತವರಾಗಿದ್ದಾರೆ. ನನಗೆ ಎಷ್ಟು ವಯಸ್ಸಾಗಿದೆ ಅಷ್ಟು ಅವರಿಗೆ ರಾಜಕೀಯ ಅನುಭವವಿರುವಂತಹ ಮುಖ್ಯಮಂತ್ರಿಗಳು. ಅವರು ಬಜೆಟ್ ಭಾಷಣದಲ್ಲಿ ಮಾತನಾಡಿದಂತಹ ಸಂದರ್ಭದಲ್ಲಿ ಈ ಮಾತನ್ನು ನಾನು ಏಕೆ ಹೇಳಿದೆನೆಂದರೆ, ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಮಾನ್ಯ ಕಾಗೋಡು ತಿಮ್ಮಪ್ಪನವರು ಕೊಡಗಿಗೆ ಬಂದಿದ್ದಾರೋ ಏನೋ ಗೊತ್ತಿಲ್ಲ. ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಕಾರ್ಗಿಲ್‌ನಲ್ಲಿ ನಮ್ಮ ಸೈನಿಕರು ವೀರಮರಣ ಅಪ್ಪಿದರು. ಚುನಾವಣೆಗೆ ಆರು ತಿಂಗಳು ಮುಂಚೆ ಇರಬಹುದು. ಆ ಸಂದರ್ಭದಲ್ಲಿ ಈಗಿನ ಮುಖ್ಯಮಂತ್ರಿಗಳು, ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು ನಮ್ಮ ಗ್ರಾಮಕ್ಕೆ ಭೇಟಿ ಕೊಟ್ಟಿದ್ದರು. ಆಗ ಮೇದಪ್ಪ ಎನ್ನುವ ವೀರಯೋಧರು ವೀರಮರಣವನ್ನು ಅಪ್ಪಿದ್ದರು.

ಅವರು ಅಲ್ಲಿಗೆ ಬಂದು ನಾವು ಕಾಂಗ್ರೆಸ್ ಪಕ್ಷದ ವತಿಯಿಂದ 50 ಸಾವಿರ ರೂಪಾಯಿಗಳನ್ನು ಪರಿಹಾರವಾಗಿ ಕೊಡುತ್ತೇವೆ ಎಂದು ಘೋಷಣೆ ಮಾಡಿದರು. ಪರಿಹಾರ ಕೊಟ್ಟರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಆಗ ಅಲ್ಲಿಯ ಪತ್ರಿಕಾಕರ್ತರು ಒಂದು ಪ್ರಶ್ನೆಯನ್ನು ಕೇಳಿದ್ದರು. "ಸನ್ಯಾಸ್ಯ ಕೃಷ್ಣರವರೇ, ತಾವು ಕೊಡಗಿಗೆ ಬಂದಿದ್ದೀರಿ. ತಾವು ಈಗ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದೀರಿ. ತಮ್ಮ ಸರ್ಕಾರ ಬಂದರೆ, ತಾವೇನಾದರೂ ಮುಖ್ಯಮಂತ್ರಿಯಾದರೆ, ಇವತ್ತು ಕೊಡಗಿಗೆ ಪ್ರತ್ಯೇಕ ರಾಜ್ಯಬೇಕು ಎಂದು ಕೂಗಿದ್ದಿದೆ. ಏಕೆ ಈ ಕೂಗು? ನೀವು ಮುಖ್ಯಮಂತ್ರಿಗಳಾದರೆ ಏನು ಮಾಡುತ್ತೀರಿ ಎಂದು ಪ್ರಶ್ನೆಯನ್ನು ಕೇಳಿದರು. ಆ ಪತ್ರಿಕಾ ವರದಿಗಳ ಕಟ್ಟಿಂಗ್ಸ್ ಕೂಡ ನನ್ನ ಹತ್ತಿರ ಇದೆ. ಸನ್ಯಾಸ್ಯ ಕೃಷ್ಣರವರು" ಈ ಕೊಡಗು ಪ್ರತ್ಯೇಕ ರಾಜ್ಯ ಏಕೆ ಕೇಳುತ್ತಿದ್ದಾರೆ ಎಂದರೆ ಇವತ್ತು ಕೊಡಗು ಬಹಳ ನಿರ್ಲಕ್ಷ್ಯತೆಗೆ ಒಳಗಾಗಿದೆ. ಕೊಡಗಿಗೆ ಸರಿಯಾದ ರಸ್ತೆಗಳು ಇಲ್ಲ, ಸರಿಯಾದ ಆಸ್ಪತ್ರೆಗಳು ಇಲ್ಲ, ಆಸ್ಪತ್ರೆಗಳು ಇದ್ದರೆ ಡಾಕ್ಟರ್‌ಗಳು ಇಲ್ಲ. ಇಂಜಿನಿಯರಿಂಗ್ ಕಾಲೇಜು ಇಲ್ಲ. ಸರಿಯಾದ ಸವಲತ್ತುಗಳು ಇಲ್ಲ. ಅದಕ್ಕೋಸ್ಕರ ಇವತ್ತು ಪ್ರತ್ಯೇಕ ಕೊಡಗು ರಾಜ್ಯ ಕೇಳುತ್ತಿದ್ದಾರೆ. ನಾನು ಈ ಕೊಡಗಿಗೆ ಸ್ಪೆಷಲ್ ಪ್ಯಾಕೇಜ್ ಕೊಟ್ಟು ಕೊಡಗಿನ ಅಭಿವೃದ್ಧಿಯನ್ನು ಮಾಡುತ್ತೇನೆ ಎಂದು ಹೇಳಿದ್ದರು. ಹಾಗಿದ್ದಾಗ ಈ ಪ್ಯಾಕೇಜ್ ಎಂದರೆ ನನಗನ್ನಿಸುತ್ತದೆ. ಮೂರು ಜನ ಮಂತ್ರಿಗಳನ್ನು ಕೊಟ್ಟುಬಿಟ್ಟಿದ್ದಾರೆ. ಆದರೆ ಲೆಕ್ಕಕ್ಕುಂಟು ಆಟಕ್ಕಿಲ್ಲ ಎನ್ನುವಂಥ ಪರಿಸ್ಥಿತಿ ಆಗಿದೆ. ಏಕೆಂದರೆ ಈ ಮೂರು ಸ್ಟೇಟ್ ಮಂತ್ರಿಗಳನ್ನು ಕ್ಯಾಬಿನೆಟ್‌ಗೆ ಸೇರಿಸುವುದಿಲ್ಲ. ಸಾಧಾರಣವಾಗಿ ಏನಾದರೂ ತೀರ್ಮಾನವಾಗುವುದಿದ್ದರೂ ಕೂಡ ಅದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗುತ್ತದೆ. ಇವರೊಬ್ಬರಿಗೂ ಇಂಡಿಪೆಂಡೆಂಟ್ ಚಾರ್ಜ್ ಇಲ್ಲ. ಈ ರೀತಿ ಹೇಳಿದಂಥ ಮುಖ್ಯಮಂತ್ರಿಗಳಿಗೆ ನಾನು ಬಜೆಟ್ ಭಾಷಣ ಸಂದರ್ಭದಲ್ಲಿ 'ಕೊಡಗಿಗೆ ಸ್ಪೆಷಲ್ ಪ್ಯಾಕೇಜ್ ಕೊಡಿ' ಎಂದು ಹೇಳಿದಾಗ ಅವರು ಹೇಳಿದರು 'ಕೊಡಗು ಜಿಲ್ಲಾಪಂಚಾಯತ್ ಅಲ್ಲ' ಎಂದು. ನಾನು ಕೂಡ ಆರು ವರ್ಷಗಳಿಂದ ಇಲ್ಲಿ ಶಾಸಕನಾಗಿ ಬಂದಿದ್ದೇನೆ. ನಾನು ಯಾವುದೇ ಸಂದರ್ಭದಲ್ಲಿ ಮಾತನಾಡುವಾಗ 'ಸನ್ಯಾಸ್ಯ ಮುಖ್ಯಮಂತ್ರಿಗಳೇ' ಎಂದು ಸಂಬೋಧನೆ ಮಾಡಿದ್ದೇನೆ. 'ಜಿಲ್ಲಾ ಪಂಚಾಯತಿ ಅಧ್ಯಕ್ಷರೇ' ಎಂದು ಸಂಬೋಧನೆ ಮಾಡಿಲ್ಲ. ಈ ರೀತಿಯಾಗಿ ವ್ಯಂಗ್ಯವಾಗಿ ಉತ್ತರವನ್ನು ಕೊಟ್ಟರೆ ನಾವಂತೂ ಸಹಿಸುವುದಕ್ಕೆ ಸಾಧ್ಯವಿಲ್ಲ. ನಾವು ಮರ್ಯಾದೆ ಕೊಡುತ್ತೇವೆ. ಮುಖ್ಯ ಮಂತ್ರಿಗಳು ಬಹಳ ಮೇಧಾವಿಗಳು. ಆದರೆ ಅವರು ಆಗಾಗ ಸಿಟ್ಟಾಗುವಂಥಾದ್ದು ಸರಿಯಲ್ಲ. ಇವತ್ತು ಬಜೆಟ್‌ನಲ್ಲಿ ಉತ್ತರ ಕರ್ನಾಟಕಕ್ಕೆ ಸಮಗ್ರ ಅಭಿವೃದ್ಧಿಗೋಸ್ಕರವಾಗಿ ಮುಖ್ಯವಾಹಿನಿಗೆ ತರುವಂಥ ಕೆಲಸ ಮಾಡಿದ್ದೇವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದು ಉತ್ತರ ಕರ್ನಾಟಕ 'ಜಿಲ್ಲಾಪಂಚಾಯತಿ ಸಭೆನಾ?' ಅಥವಾ ಅದು ಬಜೆಟ್ಟಾ? ಎಂದು ನಾನು ಕೇಳಬಯಸುತ್ತೇನೆ. ಅದೇರೀತಿ ಪುನಃ ಉತ್ತರ ಕರ್ನಾಟಕಕ್ಕೆ ಐಟಮ್ ನಂಬರ್ 96ರಲ್ಲಿ '..ವಿಶ್ವಬ್ಯಾಂಕ್, ಹುಡ್ಕೋ ಎ.ಡಿ.ಬಿ. ಮತ್ತು ದ್ವಿಪಕ್ಷೀಯ ಸಂಸ್ಥೆಗಳಂಥ ಹಣಕಾಸು ಸಂಸ್ಥೆಗಳೊಡನೆ ವ್ಯವಹರಿಸುವಾಗ ರಾಜ್ಯದ ಹಿಂದುಳಿದ ಉತ್ತರ ಭಾಗದಲ್ಲಿ ಸಾಮಾಜಿಕ ಮತ್ತು ಭೌತಿಕ ಮೂಲಭೂತ ಸೌಲಭ್ಯದಲ್ಲಿ ಸಾಕಷ್ಟು ಹಣ ತೊಡಗಿಸುವ ಬಗ್ಗೆ ನನ್ನ ಅರಿವು ಸದಾ ಜಾಗೃತವಾಗಿರುತ್ತದೆ' ಎಂದು ಹೇಳಿದ್ದಾರೆ. ಇದರ ಜೊತೆಗೆ 'ಕಚೇರಿಗಳನ್ನು ಕೂಡ ನಾನು ಉತ್ತರ ಕರ್ನಾಟಕಕ್ಕೆ ವರ್ಗಾವಣೆ ಮಾಡುತ್ತೇನೆ' ಎಂದು ಹೇಳುವ ಮಾತನ್ನು ಸಹ ಬಜೆಟ್‌ನಲ್ಲಿ ಅವರು ಹೇಳಿದ್ದಾರೆ.

ಇದರ ಜೊತೆಗೆ ಹೆದ್ದಾರಿ ಸೂಪರ್‌ಹೈವೇ ಮಾಡುವಂಥ ಸಂದರ್ಭದಲ್ಲಿ, ಒಂದು ಕಪ್ಪು ನೀರು ಕುಡಿದು ಮುಖ್ಯಮಂತ್ರಿಗಳು ಹೇಳಿದರು. ನಾನು ಮಂಡ್ಯದಿಂದ ಮತ್ತು ಬೆಂಗಳೂರಿನಿಂದ ಒಂದೇ ಸಮಯದಲ್ಲಿ ರಸ್ತೆಯನ್ನು ಮಾಡುವಂಥ ಕೆಲಸವನ್ನು ಪ್ರಾರಂಭ ಮಾಡುತ್ತೇನೆ ಎಂದು. ಹಾಗಾದರೆ ಅವರು ಮಂಡ್ಯದ ಬಗ್ಗೆ ಕಾಳಜಿ ವಹಿಸಿಲ್ಲವೇನು? ಇದನ್ನು ಬಜೆಟ್‌ನಲ್ಲಿ ತೋರಿಸಿಲ್ಲವೇನು? ಈ ಕಾಳಜಿಯನ್ನು ಅವರು ಕೊಡಗಿನ ಬಗ್ಗೆ ಏಕೆ ತೋರಿಸಲಿಲ್ಲ? ಏಕೆ ನಿರ್ಲಕ್ಷ್ಯ ಮಾಡಿದರು? ನಾನು ಕಳೆದ ಸಾರಿ ಕೊಡಗಿನ ವಿಚಾರ ಮಾತನಾಡುವಾಗ ಹೇಳಿದ್ದೆ. ಇವತ್ತು ಕೊಡಗಿನ ಕಾವೇರಿ ಉಗಮಸ್ಥಾನದಲ್ಲಿ ಯಾವ ಸ್ಥಿತಿ ಇದೆ ಎಂದು ಹೇಳಿದರೆ ನಮ್ಮ ಬೆಂಗಳೂರಿನಿಂದ ಎಲ್ಲಿಯಾದರೂ ನೀರು ತಮಿಳುನಾಡಿಗೆ ಕೊಟ್ಟರೆ ಕೂಡಲೇ ಬೆಂಗಳೂರಿನಲ್ಲಿ ದೊಡ್ಡ ರಾದ್ಧಾಂತ ಆಗುತ್ತದೆ. ಒಂದು ಕಡೆಯಿಂದ ತಮಿಳುನಾಡಿನವರು ತಮಿಳುನಾಡಿಗೆ ನೀರು ಕೊಡಬೇಕೆಂದು ಹೇಳಿದರೆ ಇನ್ನೊಂದು ಕಡೆ ಮಂಡ್ಯದವರು ನೀರು ಕೊಡಬಾರದು ಎಂದು ಕೂಗು ಎಬ್ಬಿಸುತ್ತಾರೆ. ಎಷ್ಟೋ ಲಕ್ಷಾಂತರ ರೂಪಾಯಿ ಆಸ್ತಿ ನಷ್ಟ ಕೂಡ ಮಾಡುತ್ತಾರೆ. ಧರಣ ಮಾಡುತ್ತಾರೆ. ಚಳುವಳಿ ಮಾಡುತ್ತಾರೆ. ಆದರೆ ನಮ್ಮ ಕೊಡಗಿನ ಜನತೆ ಏನು ಹೇಳುತ್ತಿದ್ದಾರೆ ಗೊತ್ತೆ ಸ್ವಾಮಿ? ಕೊಡಗಿನ ಜನತೆ ಆಡಿಕೊಳ್ಳುತ್ತಾರೆ ನಾವು ಮಂಡ್ಯಕ್ಕಿಂತ ತಮಿಳುನಾಡಿಗೆ ನೀರು ಕೊಡಬೇಕು ಎಂದು. ಇದಕ್ಕೆ ಕಾರಣ ಏನೆಂದರೆ ಇವತ್ತು ಸರ್ಕಾರದ ವತಿಯಿಂದ ಭಾಗಮಂಡಲ ಉಗಮಸ್ಥಾನ ಏನಿದೆ. ಅಲ್ಲಿ ಇದುವರೆಗೂ ಹಣ ಸರಿಯಾಗಿ ಖರ್ಚುಮಾಡಿಲ್ಲ. 25 ಲಕ್ಷ ರೂಪಾಯಿ ಸಹ ದೇವಸ್ಥಾನಕ್ಕಾಗಿ ಖರ್ಚುಮಾಡಿಲ್ಲ. ಆದರೆ ತಮಿಳುನಾಡಿನವರು ಸುಮಾರು 50 ಲಕ್ಷ ರೂಪಾಯಿ ಖರ್ಚುಮಾಡಿ ಇವತ್ತು ಒಂದು ಛತ್ರವನ್ನು ಕಟ್ಟುವಂಥ ಕೆಲಸ ಮಾಡಿದ್ದಾರೆ. ಅದರ ಜೊತೆಗೆ ಏನು ತುಲಾಸಂಕ್ರಮಣ ನಡೆಯುತ್ತದೆ. ಅವತ್ತು ಊಟವನ್ನು ಕೊಡುವಂಥ ಕೆಲಸವನ್ನು ತಮಿಳುನಾಡು ಸರ್ಕಾರ ಮಾಡುತ್ತಿದೆ. ಅದಕ್ಕೋಸ್ಕರವಾಗಿ ಇವತ್ತು ಕೊಡಗಿನ ಜನತೆ ವಿರುದ್ಧವಾಗಿ ಮಾತನಾಡುವಂಥ ಕೆಲಸಕ್ಕೆ ಹೋಗುತ್ತಿದ್ದಾರೆ. ಇವತ್ತು ಕೊಡಗು ರಾಜ್ಯಬೇಕು ಎಂದು ಮೀಟಿಂಗ್ ಮಾಡಿದಾಗ ಸುಮಾರು ಹತ್ತರಿಂದ ಇಪ್ಪತ್ತು ಸಾವಿರ ಜನ ಸೇರುತ್ತಾರೆ. ಮುಖ್ಯಮಂತ್ರಿಗಳು ಬಂದರೂ ಕೂಡ ಅಷ್ಟು ಜನ ಸೇರುವುದಿಲ್ಲ. ಪ್ರಧಾನಮಂತ್ರಿಗಳು ಬಂದರೂ ಕೂಡ ಅಷ್ಟು ಜನ ಕೊಡಗಿನಲ್ಲಿ ಸೇರುವುದಿಲ್ಲ. ಈ ಮನೋಭಾವನೆ ಈಗ ಕೊಡಗಿನವರಲ್ಲಿದೆ. ಇದನ್ನು ತಾವು ದಾನ ಮಾಡಬೇಕೆಂದರೆ ಸ್ಪೆಷಲ್ ಪ್ಯಾಕೇಜ್ ಹಾಕಬೇಕಾಗುತ್ತದೆ. ಇವತ್ತು ಕೊಡಗಿನಿಂದ ಕರ್ನಾಟಕ ರಾಜ್ಯಕ್ಕೆ ಸುಮಾರು ನಾಲ್ಕುನೂರು ಕೋಟಿ ರೂಪಾಯಿ ವರಮಾನ ಬರುತ್ತಿದೆ. ಆದರೆ ಕೊಡಗಿಗೆ ಸಿಗುವಂಥ ಹಣ ಎಷ್ಟು ಸ್ವಾಮಿ? ಇವತ್ತು ಜಿಲ್ಲಾ ಪಂಚಾಯತಿಯಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಕೇವಲ 30 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಯೋಜನೆ ಅಡಿಯಲ್ಲಿ ಇಷ್ಟು ಹಣ ಮಾತ್ರ ಇಟ್ಟಿದ್ದಾರೆ. ಮೊನ್ನೆ ನಾನು ಪಟ್ಟಿಮಾಡಿದೆ ಯಾವ ಹೆಡ್‌ನಲ್ಲಿ ಎಷ್ಟೆಷ್ಟು ಇದೆಯೆಂದು. ವಿವರವಾದ ಪಟ್ಟಿ ನನ್ನ ಹತ್ತಿರ ಇದೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಜೊತೆಗೆ ಯೋಜನೇತರದಲ್ಲಿ ಸುಮಾರು 42 ಕೋಟಿ ಹಣವನ್ನು ನೀವು ಇಟ್ಟಿದ್ದೀರಿ. ಕಡೆಯಪಕ್ಷ ನಮ್ಮ ಕೊಡಗಿಗೆ ಹೆಚ್ಚು ಬೇಡ, 30 ಪರ್ಸೆಂಟ್ ಆದರೂ ಖರ್ಚುಮಾಡುವಂಥ ಕಾರ್ಯಕ್ರಮವನ್ನು ಕೈಗೊಂಡು ಅದನ್ನು ಮಾಡಬೇಕಾಗಿದೆ. ನಮ್ಮ ಕೊಡಗಿನಲ್ಲಿ ಬಹಳ ಹೆಚ್ಚು ಮಳೆ ಬೀಳುತ್ತದೆ. ಮೈಸೂರು, ಮಂಡ್ಯ, ಬೆಂಗಳೂರು ಕಡೆ ಮಳೆ ಇಷ್ಟು ಬೀಳುವುದಿಲ್ಲ. ಇಲ್ಲಿ ಮಾಡುವಂಥ ರಸ್ತೆ

ಆರು ತಿಂಗಳೂ ಉಳಿಯುವುದಿಲ್ಲ. ನೀವು ಏನು ರಸ್ತೆಗೆ ಪಿ.ಡಬ್ಲ್ಯೂ.ಡಿ. ಯಿಂದ ಒಂದು ಕಿಲೋಮೀಟರ್‌ಗೆ 3 ಲಕ್ಷ 20 ಸಾವಿರ ರೂಪಾಯಿ ಕೊಟ್ಟರೆ ನಮ್ಮಲ್ಲಿ 4 ಲಕ್ಷ ಕೊಡಬೇಕಾಗುತ್ತದೆ. ಏಕೆಂದರೆ ಇದು ಅತಿಹೆಚ್ಚು ಮಳೆಬೀಳುವ ಪ್ರದೇಶ. ಈ ರಸ್ತೆಗಳು ಈ ಕಾರಣಕ್ಕಾಗಿ ಉಳಿಯುವುದಿಲ್ಲ. ಆದ್ದರಿಂದ ಕೊಡಗಿನಲ್ಲಿ ವಿಶೇಷವಾಗಿ ರಸ್ತೆಗಳಿಗಾಗಿ ಹೆಚ್ಚು ಹಣ ಕೊಟ್ಟರೆ ಮಾತ್ರ ರಸ್ತೆ ಕೆಲಸ ಉಳಿಯುತ್ತದೆ ಎಂದು ಹೇಳುತ್ತ, ಇದರ ಜೊತೆಗೆ ಇವತ್ತು ಕೊಡಗಿನಿಂದ 800 ಕೋಟಿ ಹಣ ನಮ್ಮ ವಿದೇಶಿ ವಿನಿಮಯ ನಮಗೆ ಸಿಗುತ್ತಿದೆ. ಇದು ಕೂಡ ನಮ್ಮ ಕೊಡಗು ಕೊಡುವಂಥ ವರದಾನ. ಆದರೆ ಇವತ್ತು ಏನಾಗಿದೆ? ಸರಿಯಾದ ಶಿಕ್ಷಣ ಸಿಗಬೇಕಾದರೆ ಇವತ್ತು ಕೊಡಗಿನವರು ಮಂಗಳೂರು, ಬೆಂಗಳೂರು ಕಡೆಗೆ ಓಡಾಡುವಂಥ ಪರಿಸ್ಥಿತಿಯಾಗಿದೆ. ಆದೇ ರೀತಿ ಆಸ್ಪತ್ರೆ ಸವಲತ್ತು ಏನಾದರೂ ಸಿಗಬೇಕು ಎಂದರೆ ಅದು ಕೂಡ ಬೆಂಗಳೂರು, ಮೈಸೂರು ಮುಂತಾದ ಕಡೆಗೆ ಹೋಗಬೇಕಾದ ಪರಿಸ್ಥಿತಿಯಾಗಿದೆ. ಕೊಡಗಿನಲ್ಲಿ ರಸ್ತೆಗಳು ಯಾವ ಸ್ಥಿತಿಯಲ್ಲಿವೆ ಎಂದರೆ ರಸ್ತೆಯಲ್ಲಿ ಗುಂಡಿ ಇದೆಯೋ, ಗುಂಡಿಯಲ್ಲಿ ರಸ್ತೆ ಇದೆಯೋ ಎಂದು ನೋಡುವಂಥ ಪರಿಸ್ಥಿತಿಯಾಗಿದೆ. ಈ ಸ್ಥಿತಿಯಲ್ಲಿ ಇವತ್ತು ಕೊಡಗು ಇದೆ. ತಾವು ದಯವಿಟ್ಟು ಇದರ ಬಗ್ಗೆ ಕಾಳಜಿಯನ್ನು ವಹಿಸಬೇಕಾಗುತ್ತದೆ. ಇಲ್ಲದಿದ್ದರೆ ಕೊಡಗಿನ ಪರಿಸ್ಥಿತಿ, ಕೊಡಗಿನ ಕತೆ ಬರೇ ವ್ಯಥೆಯಾಗಿ ಉಳಿಯುತ್ತದೆ. ಮಾನ್ಯ ಮಂತ್ರಿಗಳಾದ ಶ್ರೀ ಕಾಗೋಡು ತಿಮ್ಮಪ್ಪನವರು ಸ್ವಲ್ಪ ಈ ಕಡೆಗೆ ಗಮನಹರಿಸಬೇಕು. ದಯವಿಟ್ಟು ಕೊಡಗಿಗೆ ಸ್ಪೆಷಲ್ ಪ್ಯಾಕೇಜ್ ಮಾಡದಿದ್ದರೆ ಕೊಡಗಿನ ಕತೆ ವ್ಯಥೆಯಾಗಿಯೇ ಉಳಿಯುತ್ತದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾದ ಶ್ರೀ ಫೋರ್ಡಡೆಯವರೂ ಈ ಕಡೆ ಗಮನಹರಿಸಬೇಕು. ಕೊಡಗಿಗೆ ಸ್ಪೆಷಲ್ ಗ್ರಾಂಟ್ ಕೊಡಬೇಕು. ಕೊಡಗಿನ ಪಂಚಾಯತಿಗೆ ಹೆಚ್ಚು ಹಣ ಬಿಡುಗಡೆ ಮಾಡಬೇಕಾಗುತ್ತದೆ. ಈಗ ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂದು ಕೇಳುತ್ತಿದ್ದಾರೆ. ತಾವು ಅದರ ವಿಚಾರವಾಗಿ ಗಮನಹರಿಸಿ ಹೆಚ್ಚಿನ ಅಭಿವೃದ್ಧಿ ಮಾಡಿದರೆ ಅದು ದಮನವಾಗುತ್ತದೆ. ಕೊಡಗು ರಾಜ್ಯ ಕೇಳುವುದು ನಿಲ್ಲುತ್ತದೆ. ಈ ಉದ್ದೇಶದಿಂದ ಜಿಲ್ಲಾ ಪಂಚಾಯತಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತ ಕಳೆದ ವಿಧಾನಸಭೆಯಲ್ಲಿ ನಾನು ಈ ಫಾರೆಸ್ಟ್ ಕಳ್ಳತನ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ.

ಈ ಸದನದಲ್ಲಿ ಸುಮಾರು 16 ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವಂತೆ ಆದೇಶವನ್ನು ಕೂಡ ನೀಡಿತು. ಆದರೆ ಏನಾಗಿದೆ. ಆ ಅಧಿಕಾರಿಗಳೆಲ್ಲರೂ ಇವತ್ತು ಪುನಃ ಕೆಲಸವನ್ನು ಮಾಡುತ್ತಿದ್ದಾರೆ. ಈ ಸದನದಲ್ಲಿ ಕೊಟ್ಟಂಥ ಉತ್ತರದಲ್ಲಿ ಶಾಂತಹಳ್ಳಿಯ ಕುಮಾರಳ್ಳಿ ಎಂಬ ಗ್ರಾಮದಲ್ಲಿ ಸುಮಾರು 43 ಲಕ್ಷ ರೂಪಾಯಿಗಳ ಮರ ದರೋಡೆಯಾಗಿದೆ ಎಂದು ಲಿಖಿತ ಮೂಲಕ ಉತ್ತರವನ್ನು ಕೊಟ್ಟಿದ್ದಾರೆ. ಈ ರೀತಿ ಉತ್ತರ ಕೊಟ್ಟರೂ ಕೂಡ ಏನಾಗಿದೆ. ಯಾರು ದೊಡ್ಡ ದೊಡ್ಡ ಅಧಿಕಾರಿಗಳಿದ್ದಾರೆ ಅವರೆಲ್ಲಾ ಹೋದರು. ಪಾಪದ ಬಡಪಾಯಿ ಯಾವ ರೇಂಜರ್ ಇದ್ದಾರೆ, ಅವರ ಮೇಲೆ ರಿಕವರಿ ಎಂದು ಹೇಳಿ ಕೇಸ್ ಹಾಕುವಂಥ ಕೆಲಸವನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಎಲ್ಲಾ ದಾಖಲಾತಿಗಳನ್ನು ಕೂಡ ಒದಗಿಸಿದ್ದೆ. ಆದರೂ ಕೂಡ ಯಾವುದೇ ಪ್ರಯೋಜನವಾಗಲಿಲ್ಲ ಸ್ವಾಮಿ. ಪ್ರಜಾವಾಣಿ ಪೇಪರಿನಲ್ಲಿ ಕೂಡ ಬರುತ್ತೆ. 31ನೇ ಮಾರ್ಚ್ ಪೇಪರಿನಲ್ಲಿ ಮರ ಕಳ್ಳಸಾಗಾಣಿಕೆ ಅಧಿಕಾರಿಗಳಿಗೆ ಹಾಜರಾಗಲು ಆದೇಶ. ಇದು ಎಲ್ಲಿಂದ ಎಂದರೆ, ಹೈಕೋರ್ಟ್‌ನಿಂದ ಆದೇಶ ಬಂದಿದೆ. ಇವತ್ತು ಮರ ಕಳ್ಳತನ

ಮಾಡುವವರು ಯಾರು ಎಂದರೆ, ನಮಗೆ ನಾಚಿಕೆಯಾಗುತ್ತದೆ. ನಾವು ನೊಂದು ಹೇಳುವಂಥ ಪರಿಸ್ಥಿತಿಗೆ ತಲುಪಿದ್ದೇವೆ. ಎಲ್ಲಿ ಮರಗಳ್ಳತನವಾಗುತ್ತದೆ ಅಲ್ಲಿ ಫಾರೆಸ್ಟ್ ಅಧಿಕಾರಿಗಳ ಕೈವಾಡವೇ ಹೆಚ್ಚು. ಇವತ್ತು ಫಾರೆಸ್ಟ್ ಅಧಿಕಾರಿಗಳೇ ಕಳ್ಳರು. ಈ ಸ್ಥಿತಿಗೆ ನಾವು ಇಂದು ತಲುಪಿದ್ದೇವೆ. ಇದರ ಜೊತೆಗೆ ಮಡಿಕೇರಿಯ ಕೋಪಟ್ಟಿ ಎಂಬ ಸ್ಥಳ. ಅಲ್ಲಿ ಸುಮಾರು 3 ಎಕರೆ ಫಾರೆಸ್ಟ್‌ನಿಂದ, 25 ಕೋಟಿ ರೂಪಾಯಿಯಷ್ಟು ಮರವನ್ನು ಕದ್ದಿದ್ದಾರೆ. ಅದರಲ್ಲೂ ಕೂಡ ಒಬ್ಬ ಐಪಿಎಸ್ ಆಫೀಸರ್ ಮೇಲೆ ಕೇಸ್ ದಾಖಲಾಗಿದೆ. ಆ ಐ ಪಿ ಎಸ್ ಆಫೀಸರು ಇಲ್ಲಿರುವವರು ಅಲ್ಲ. ಅವರು ಕೇರಳದವರು. ಇದರ ಬಗ್ಗೆ ಕೂಡ ಇವತ್ತು ಸಿಓಡಿ ಎನ್‌ಕ್ವೈರಿ ಆಗುತ್ತಾ ಇದೆ. ಇವತ್ತು ಸನ್ಮಾನ್ಯ ಫಾರೆಸ್ಟ್ ಮಂತ್ರಿಗಳು ಕಾಣುವುದಿಲ್ಲ. ಆದರೆ, ಅವರು ಏನು ಕ್ರಮ ಕೈಗೊಂಡರು? ಏನಿಲ್ಲ. ಒಂದು ಸಸ್ಪೆನ್‌ಷನ್ ಮುಗಿಯಿತು. ಪುನಃ ಅವರೇ ಅಧಿಕಾರಕ್ಕೆ ಬರುತ್ತಾರೆ. ಪುನಃ ಇದೇ ಲೂಟಿ. ಮೊನ್ನೆ ಮೊನ್ನೆ ನಾಗರಹೊಳೆಯಲ್ಲಿ ಸುಮಾರು 10 ಲಕ್ಷ ರೂಪಾಯಿಗಳ ತೇಗದ ಮರಗಳನ್ನು ಫಾರೆಸ್ಟ್‌ನಲ್ಲಿ ಕದ್ದಿದ್ದಾರೆ. ಈ ವಿಷಯವನ್ನು ನಾವು ಪತ್ರಿಕೆಗಳಿಗೆ ಕೊಟ್ಟು, ಗಲಾಟೆ ಮಾಡಿದ ನಂತರ, ಒಬ್ಬ ರೇಂಜರನ್ನು ಸಸ್ಪೆಂಡ್ ಮಾಡಿದ್ದಾರೆ. ಈ ರೀತಿ ಸಸ್ಪೆಂಡ್ ಮಾಡುವುದು ನಂತರ ರೀ-ಇನ್‌ಸ್ಟೇಟ್ ಮಾಡುವುದು ಎಂದರೆ, ಪರಿಸ್ಥಿತಿ ಏನಾಗಬಹುದು? ಈ ಸ್ಥಿತಿಯಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಇದೆ. ಈ ಫಾರೆಸ್ಟ್ ಇಲಾಖೆಯಲ್ಲಿ ಕೆಲವು ಅಧಿಕಾರಿಗಳು ಇದ್ದಾರೆ. ಕೆಲವು ಅಧಿಕಾರಿಗಳು ಬಹಳ ಒಳ್ಳೆಯವರಿದ್ದಾರೆ. ಆದರೆ, ನನಗೆ ತಿಳಿದಹಾಗೆ, 1996-97ರ ವರದಿ ಸಿಕ್ಕಿದೆ. ಈ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟು ಜನ ಕನ್‌ಸರ್ವೇಟರ್ಸ್ ಇದ್ದಾರೆ, ಎಷ್ಟು ಜನ ಚೀಫ್ ಕನ್‌ಸರ್ವೇಟರ್ಸ್ ಇದ್ದಾರೆ, ಎಷ್ಟು ಜನ ಡಿ.ಎಫ್.ಓ.ಗಳಿದ್ದಾರೆಂದು ನನಗೆ ಮಾಹಿತಿ ಸಿಕ್ಕಿದೆ. ಅದನ್ನು ನೋಡಿದಾಗ, ಯಾವ ಅಧಿಕಾರಿಗಳು ಕೆಳ ಹಂತದಲ್ಲಿದ್ದಾರೆ. ಅವರನ್ನು ನೇಮಕ ಮಾಡುವಂಥ ಕೆಲಸವನ್ನು ಮಾಡಲಿಲ್ಲ.

ಶ್ರೀ ಎಸ್. ಸುರೇಶ ಕುಮಾರ್: ಮಾನ್ಯ ಉಪಾಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಮಾನ್ಯ ಕಾಗೋಡು ತಿಮ್ಮಪ್ಪನವರ ಗಮನವನ್ನು ಸೆಳೆಯುತ್ತೇನೆ. ಅಪ್ಪಚ್ಚುರಂಜನ್‌ರವರು ಕೊಡಗಿನಲ್ಲಿ ಆದ ಬಗ್ಗೆ, ಏನೊಂದು ಹೇಳಿದರು. ಅದಕ್ಕೆ ಸಂಬಂಧಿಸಿದಂತೆ ನಾನು ಲೇಟೆಸ್ಟ್ ವಿಚಾರವನ್ನು ಹೇಳುತ್ತೇನೆ.

> "The High Court on Wednesday April 13th pulled up the State Government and imposed Rs. 1000/- towards cost for its failure to file objections in connection with a forest case pertaining to illegal felling of trees in Kodagu district. Further,
>
> A Division Bench Comprising Justice Ashokban and Justice Subatint expressed displeasure that the Government had failed to furnish objections though sufficient time was given."

ಒಂದು ಕಡೆ ಮರ ಕಡಿಯುವುದು, ಇನ್ನೊಂದು ಕಡೆ ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಷನ್ ಕೊಡಗು ಏಕೀಕರಣ ಸಂಘದವರು ಹಾಕಿ, ಇದನ್ನು ಫೈಟ್ ಮಾಡುತ್ತಿರುವಾಗ, ನಮ್ಮ ಕೆಲಸವನ್ನೇ

ಅವರು ಮಾಡುತ್ತಿದ್ದಾರೆ. ನಮ್ಮ ಕಾಡುಗಳನ್ನು ಅವರು ಉಳಿಸುತ್ತಿದ್ದಾರೆ. ಅವರು ಫೈಟ್ ಮಾಡುವಾಗ, ಸರ್ಕಾರ ಅಬ್ಜಕ್ಷನ್ ಫೈಲ್ ಮಾಡುವುದಕ್ಕೂ ಆಗದೇ ಇದ್ದರೆ, ಸರ್ಕಾರ ಈ ಮರ ಕಡಿಯುವವರ ಜೊತೆ ಶಾಮೀಲು ಎಂದು ಹೇಳಬೇಕೋ ಬೇಡವೋ? ಆ ಅರ್ಥ ನಮಗೆ ಬರುತ್ತೋ ಇಲ್ಲವೋ? ಇದಕ್ಕೆ ಉತ್ತರ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸುಬ್ಬಾರೆಡ್ಡಿಯವರು ಇಲ್ಲಿ ಇಲ್ಲ. ಒಂದೊಂದು ಸಾರಿ ಏನಾಗುತ್ತೆ, ನಾವು ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಹಾಕುತ್ತೇವೆ. ಆ ರಿಟ್ ಪಿಟಿಷನ್ ನೋಟೀಸ್ ಒಂದೊಂದು ಸಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹೋಗಿರುವುದಿಲ್ಲ. ಅದರಿಂದಾಗಿ ಸಕಾಲದಲ್ಲಿ ಹಾಕದಿರತಕ್ಕ ಸಂದರ್ಭವೂ ಉಂಟು. ಆದರೆ, ಇದರಲ್ಲಿ ಏಕೆ ಆಗಿದೆ ಎಂಬುದು ನನಗೆ ಗೊತ್ತಿಲ್ಲ. ಮಾನ್ಯ ಅರಣ್ಯ ಸಚಿವರು ಬಂದಿಲ್ಲ. ಇದರಲ್ಲಿ ಏಕೆ ಅಬ್ಜಕ್ಷನ್ ಹಾಕಿಲ್ಲ ಎಂಬ ವಿವರಣೆಯನ್ನು ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಏಕೆಂದರೆ ನಮ್ಮ ಇಲಾಖೆಗೆ ಸಂಬಂಧಪಟ್ಟ ಒಂದು ಕೇಸ್‌ನಲ್ಲಿ ನಮ್ಮವರು ಹಾಕಿಯೇ ಇಲ್ಲ. ಆ ಕೇಸೇ ಡಿಸ್‌ಪೋಸ್ ಆಗಿಬಿಟ್ಟಿದೆ. ಆಕಸ್ಮಾತ್ ಅಡ್ವರ್ಸ್ ಡಿಸೀಷನ್ ಆ ಕೇಷ್‌ನಲ್ಲಿ ಆಗಿರಲಿಲ್ಲ. ಏನೋ ಬ್ಯಾಲೆನ್ಸಿಂಗ್, ಅದು ಕನ್‌ಸಿಡರೇಷನ್ ಎಂದು ಹೇಳಿ ಕೊಟ್ಟುಬಿಟ್ಟರು. ತಕ್ಷಣ ನಾನು ಸಂಬಂಧಪಟ್ಟ ಕಾನೂನು ಸಚಿವರ ಗಮನಕ್ಕೆ ತಂದೆ. ಆ ಅಡ್ವೋಕೇಟನ್ನು ತೆಗೆದುಹಾಕಿದ್ದೇವೆ. ಒಂದೊಂದು ಸಾರಿ ಅಡ್ವೋಕೇಟ್ ಕೂಡ ನೋಟೀಸ್ ತೆಗೆದುಕೊಳ್ಳುವುದಿಲ್ಲ. ಇಲ್ಲಿಗೆ ಇನ್‌ಫರ್ಮೇಷನ್ ಕಳುಹಿಸುವುದಿಲ್ಲ.

ಶ್ರೀ ಎಸ್ ಸುರೇಶ್ ಕುಮಾರ್: ಇದರಲ್ಲಿ ಬಹಳ ಮುಖ್ಯವಾದ ಒಂದು ಅಂಶ. "The Court, While hearing a public interest litigation by Kodagu Ekikarana Sangha on March 29th, had observed that there was a failure on the part of the Government to implement the findings of the vigilance report pertaining to the Kumarahalli Timbers scam in Kodagu".

ವಿಜಿಲೆನ್ಸ್ ಕಮಿಟಿ ರಿಪೋರ್ಟ್ ಕೂಡ ಕೊಟ್ಟಿತ್ತು. ಎಷ್ಟರಮಟ್ಟಿಗೆ ಟಿಂಬರ್‌ನಲ್ಲಿ ಕಳ್ಳತನವಾಗಿದೆ ಎಂದು. ಆ ವಿಜಿಲೆನ್ಸ್ ಕಮಿಟಿ ರಿಪೋರ್ಟ್‌ನ್ನು ನೀವು ಇಂಪ್ಲಿಮೆಂಟ್ ಮಾಡದೇ ಇದ್ದಿದ್ದರಿಂದ ಈ ಕೊಡಗು ವಿಕೇಕರಣ ಸಮಿತಿಯವರು ಹೈಕೋರ್ಟಿಗೆ ಹೋಗಬೇಕಾಗಿ ಬಂತು. ಅಲ್ಲಿಗೆ ಹೋಗಿಯೂ ಕೂಡ ಇದನ್ನು ಸರಿ ಮಾಡುತ್ತೇವೆಂದು ಹೇಳುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಅರಣ್ಯ ಇಲಾಖೆಯ 1996-97ನೇ ಸಾಲಿನ ವರದಿ. ಕರ್ನಾಟಕ ರಾಜ್ಯದಲ್ಲಿ ಸುಮಾರು 1 ಲಕ್ಷದ 90 ಸಾವಿರದ 998 ಚದರ ಮೀಟರ್ ಪ್ರದೇಶಗಳು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುತ್ತದೆ. ಸ್ವಾಮಿ, ನಾನು ಆಗಲೇ ಹೇಳಿದೆ. ಈ ಅರಣ್ಯ ಇಲಾಖೆಯಲ್ಲಿ ಎಷ್ಟು ಜನ ಚೀಫ್ ಕನ್‌ಸರ್ವೇಟರ್ಸ್, ಮತ್ತು ಪ್ರಿನ್ಸಿಪಲ್ ಚೀಫ್ ಕನ್‌ಸರ್ವೇಟರ್ಸ್ ಇದ್ದಾರೆ ಎಂದು ಹೇಳಿದೆ. ನನಗೆ ತಿಳಿದಹಾಗೆ ಚೀಫ್ ಕನ್‌ಸರ್ವೇಟರ್ಸ್‌ಗಳು 7 ಜನರು ಇದ್ದಾರೆ. ಕಳೆದ 10 ವರ್ಷಗಳ ಹಿಂದೆ ಕೇವಲ 2 ಜನ ಕನ್‌ಸರ್ವೇಟರುಗಳು ಮಾತ್ರ ಇದ್ದರು.

ಆದರೆ, ಈ ಮೇಲಾಧಿಕಾರಿಗಳ ಐ.ಎಫ್.ಎಸ್. ಪೋಸ್ಟ್ ಏನಿದೆ, ಅದನ್ನು ಹೆಚ್ಚು ಮಾಡುತ್ತಾ ಇದ್ದಾರೆ. ಆದರೆ, ಈ ಕೆಳ ಹಂತದಲ್ಲಿ ಯಾರು ಗಾರ್ಡ್ ಇದ್ದಾರೆ, ಫಾರೆಸ್ಟರ್ ಇದ್ದಾರೆ, ರೇಂಜರ್ ಇದ್ದಾರೆ. ಇವರನ್ನು ನೇಮಕಾತಿ ಮಾಡುವ ಕೆಲಸವನ್ನು ಮಾಡಲಿಲ್ಲ. ಒಬ್ಬ ಐಎಫ್ಎಸ್ ಅಧಿಕಾರಿಗಳಿಗೆ ಸಂಬಳ ಮತ್ತು ಸಾರಿಗೆ ವೆಚ್ಚ ಕೊಡುವುದಕ್ಕೆ ನಾವು ಕಡಿಮೆ ಪಕ್ಷ 20 ಜನ ಫಾರೆಸ್ಟರನ್ನು ನಿರ್ವಹಣೆ ಮಾಡಬಹುದು. ಇದರಿಂದ ಈ ಫಾರೆಸ್ಟ್ ಕಳ್ಳತನವನ್ನು ತಡೆಗಟ್ಟಬಹುದು. ಆದ್ದರಿಂದ ಈ ಫಾರೆಸ್ಟನ್ನು, ಗಾರ್ಡ್‌ಗಳನ್ನು ನೇಮಕಾತಿ ಮಾಡುವುದರಿಂದ, ಇವರನ್ನು ಹೆಚ್ಚು ಮಾಡುವುದರಿಂದ ಈ ಫಾರೆಸ್ಟ್ ಕಳ್ಳತನವನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಉಪಾಧ್ಯಕ್ಷರೇ, ಐಎಫ್ಎಸ್ ಅಧಿಕಾರಿಗಳ ವಿಚಾರದಲ್ಲಿ ಅವರು ಹೇಳುತ್ತಾ ಇರುವುದರ ಬಗ್ಗೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಎಲ್ಲಾ ಐಎಫ್ಎಸ್ ಅಧಿಕಾರಿಗಳೂ ಅವರ ಕಚೇರಿಗಳನ್ನು ಒಂದು ಕೃತಕ ಕಾಡಿನ ರೀತಿ ಮಾಡಿಕೊಂಡಿದ್ದಾರೆ. ಅಲ್ಲೇ ಒಂದು ಕಾಡು ನಿರ್ಮಾಣ ಮಾಡಿರುತ್ತಾರೆ. ಅಲ್ಲಿಯೇ ಒಂದು ಹುಲಿ, ಚಿರತೆ ಇದ್ದಹಾಗೆ. ಅವರ ವೈಭೋಗದ ಜೀವನ ನೋಡಿದರೆ, ಅದನ್ನೇ ಕಾಡು ಎಂದು ತಿಳಿದುಕೊಂಡು ಅಲ್ಲಿಯೇ ಇದ್ದುಬಿಡುತ್ತಾರೋ ಅಥವಾ ಕಾಡಿನೊಳಗೆ ಹೋಗಿ, ಕಾಡಿನ ಸಂರಕ್ಷಣೆ ಕೆಲಸ ಮಾಡುತ್ತಾರೋ ಎನ್ನುವ ಅನುಮಾನ ಆಗುವ ರೀತಿಯಲ್ಲಿ ಅವರ ಕಾರ್ಯಚಟುವಟಿಕೆಗಳು ನಡೆಯುತ್ತಿವೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ಈ ಕರ್ನಾಟಕ ರಾಜ್ಯದಲ್ಲಿ ಅರಣ್ಯ ಬೆಳೆಸಿದ ಪ್ರದೇಶ ಎಷ್ಟು ಅಂತ ಹೇಳಿದರೆ 30 ಸಾವಿರ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಯ ಸಂದರ್ಭದಲ್ಲಿ ಮಾನ್ಯ ಸದಸ್ಯರು ಈಗ ಹೇಳುತ್ತಿರುವಂತಹ ವಿಷಯಗಳನ್ನು ಪ್ರಸ್ತಾಪ ಮಾಡಿದರೆ ಕರಾರುವಾಕ್ಕಾಗಿ ಸಂಬಂಧಪಟ್ಟಂತಹ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ಅದಕೋಸ್ಕರ ಬೇಡಿಕೆಗಳ ಮೇಲಿನ ಚರ್ಚೆ ಬಂದಾಗ ಮಾನ್ಯ ಸದಸ್ಯರು ಹೆಚ್ಚು ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು ಎನ್ನುವುದಕ್ಕೆ ಇಂತಹ ಪ್ರಶ್ನೆಗಳು ಉದ್ಭವಿಸಿದಾಗ ಅದರ ಪ್ರಾಮುಖ್ಯತೆ ಹೆಚ್ಚಾಗುತ್ತದೆ. ಆದ್ದರಿಂದ ನಾನು ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ ಪ್ರತಿಯೊಂದು ಇಲಾಖೆಯ ವಿವರಗಳನ್ನು ಕೂಡ ತಿಳಿದುಕೊಂಡು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುವಂತಹ ಸಂದರ್ಭದಲ್ಲಿ ಹೇಳುವುದು ಕಷ್ಟವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಜನರಲ್ ಪಾಲಿಸಿ ಬಗ್ಗೆ ಉತ್ತರ ಹೇಳಬಹುದು. ಒಟ್ಟಾರೆ ಆಡಳಿತ ವ್ಯವಸ್ಥೆ ಬಗ್ಗೆ ಅವರಿಗೆ ಅನುಕೂಲವಾಗುತ್ತದೆ. ಒಟ್ಟಾರೆ ಮಾನ್ಯ ಸದಸ್ಯರು ಇಂತಹ ವಿಷಯಗಳನ್ನು ಇಟ್ಟುಕೊಂಡು ಇಲಾಖೆ ಬೇಡಿಕೆಗಳ ಮೇಲೆ ಚರ್ಚೆಗೆ ಬಂದಾಗ ಪ್ರಸ್ತಾಪ ಮಾಡಿದರೆ ಖಂಡಿತವಾಗಿ ಸರ್ಕಾರಕ್ಕೂ, ಸಾರ್ವಜನಿಕರಿಗೂ ಅದರಿಂದ ಹೆಚ್ಚು ಉಪಯುಕ್ತವಾಗುತ್ತದೆ. ಈ ಸಲಹೆಯನ್ನು ನಾನು ಮಾನ್ಯಸದಸ್ಯರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದಕೋಸ್ಕರ ನಾನು ಅರಣ್ಯ ವಿಚಾರವನ್ನು ಹೆಚ್ಚು ಮಾತನಾಡುವುದಕ್ಕೆ

ಹೋಗುವುದಿಲ್ಲ. ನಾನು ಕೊಡಗಿಗೆ ಸಂಬಂಧಪಟ್ಟ ವಿಚಾರವನ್ನು ಸ್ವಲ್ಪ ಮಾತನಾಡುವುದಕ್ಕೆ ಇಚ್ಛಿಪಡುತ್ತೇನೆ. ನಮ್ಮ ಕೊಡಗು ಜಿಲ್ಲೆ ಭೌಗೋಳಿಕ ವಿಸ್ತೀರ್ಣದಲ್ಲಿ 4,10 757 ಹೆಕ್ಟೇರ್ ಇದೆ. ಅದರಲ್ಲಿ 1,45,145 ಹೆಕ್ಟೇರ್ ಮಡಿಕೇರಿ ತಾಲ್ಲೂಕಿಗೆ ಬರುತ್ತದೆ. ಅದರಲ್ಲಿ 99,999 ಹೆಕ್ಟೇರ್ ಜಮ್ಮಿನು ಸೋಮವಾರ ಪೇಟೆ ತಾಲ್ಲೂಕಿಗೆ ಬರುತ್ತದೆ. ವೀರರಾಜಪೇಟೆಗೆ ಸುಮಾರು 1,65,731 ಹೆಕ್ಟೇರ್ ಜಾಗ ಬರುತ್ತದೆ. ಅದರಲ್ಲಿ ಅರಣ್ಯವನ್ನು ಬೆಳೆಸಿರುವುದು ಮಡಿಕೇರಿ ತಾಲ್ಲೂಕಿನಲ್ಲಿ 47,514 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಸಿದ್ದಾರೆ. ಸೋಮವಾರ ಪೇಟೆ ತಾಲ್ಲೂಕಿನಲ್ಲಿ 20,849 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸಿದ್ದಾರೆ. ವಿರಾಜಪೇಟೆ ತಾಲ್ಲೂಕಿನಲ್ಲಿ 66,234 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸಿದ್ದಾರೆ. ಅದರಲ್ಲಿ ವ್ಯವಸಾಯಕ್ಕೆ ಉಪಯೋಗಿಸಿದ ಪ್ರದೇಶ ಎಷ್ಟು ಅಂತ ಹೇಳಿದರೆ ಮಡಿಕೇರಿಯಲ್ಲಿ ಸುಮಾರು 4,380 ಹೆಕ್ಟೇರ್ ಪ್ರದೇಶವನ್ನು ಉಪಯೋಗಿಸಿಕೊಂಡಿದ್ದಾರೆ. ಅದೇ ರೀತಿ ನಮ್ಮ ಸೋಮವಾರಪೇಟೆ ತಾಲ್ಲೂಕಿನಲ್ಲಿ 16,110 ಹೆಕ್ಟೇರ್ ಪ್ರದೇಶವನ್ನು ಉಪಯೋಗಿಸಿಕೊಂಡಿದ್ದಾರೆ. ವೀರರಾಜಪೇಟೆ ತಾಲ್ಲೂಕಿನಲ್ಲಿ 3501 ಹೆಕ್ಟೇರ್ ಪ್ರದೇಶವನ್ನು ನೀರಾವರಿಗಾಗಿ ಉಪಯೋಗಿಸಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಹಲವಾರು ವರ್ಷಗಳಿಂದ ಡ್ಯಾಮ್‌ಗಳನ್ನು ಕಟ್ಟಿ ನೀರನ್ನು ಕೊಡುವಂತಹ ವ್ಯವಸ್ಥೆ ಹಾರಂಗಿಯಲ್ಲಿ ಇದೆ. ಈ ಹಾರಂಗಿ ಡ್ಯಾಮ್‌ನಿಂದ ನಮ್ಮ ಸೋಮವಾರಪೇಟೆ ತಾಲ್ಲೂಕಿಗೆ ಸುಮಾರು 2185 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರಾವರಿಯಾಗುತ್ತದೆ. ಏತನೀರಾವರಿಯಲ್ಲಿ ಸುಮಾರು 607 ಹೆಕ್ಟೇರ್ ಪ್ರದೇಶ ನೀರಾವರಿಯಾಗುತ್ತದೆ. ಒಟ್ಟು 2792 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ನೀರಾವರಿಯಾಗುತ್ತದೆ. ಅದೇ ರೀತಿಯಲ್ಲಿ ಅರಕಲಗೂಡು ತಾಲ್ಲೂಕಿನಲ್ಲಿ 7316 ಹೆಕ್ಟೇರ್ (ಪ್ರದೇಶದಲ್ಲಿ ಮಾತ್ರ ನೀರಾವರಿಯಾಗುತ್ತದೆ.ಏತ ನೀರಾವರಿಯಿಂದ ಸುಮಾರು 1619 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯಾಗುತ್ತದೆ. ಒಟ್ಟು 8935 ಹೆಕ್ಟೇರ್ ಪ್ರದೇಶದಲ್ಲಿ ಅರಕಲಗೂಡು ತಾಲ್ಲೂಕಿನಲ್ಲಿ ನೀರಾವರಿಯಾಗುತ್ತದೆ. ಅದೇ ರೀತಿಯಲ್ಲಿ ಪಿರಿಯಾಪಟ್ಟಣದಲ್ಲಿ 4901 ಹೆಕ್ಟೇರ್‌ಗೆ ನೀರಾವರಿಯಾಗುತ್ತದೆ. ಏತನೀರಾವರಿಯಿಂದ 10,522 ಹೆಕ್ಟೇರ್‌ಗೆ ನೀರಾವರಿಯಾಗುತ್ತದೆ. ಈ ರೀತಿ ಒಟ್ಟು 15,423 ಹೆಕ್ಟೇರ್‌ಗೆ ನೀರಾವರಿಯಾಗುತ್ತದೆ. ಕೆ.ಆರ್. ನಗರದಲ್ಲಿ ಸುಮಾರು 12,309 ಹೆಕ್ಟೇರ್‌ಗೆ ನೀರಾವರಿಯಾಗುತ್ತದೆ. ಅಲ್ಲಿ ಯಾವುದೇ ಏತನೀರಾವರಿ ಇಲ್ಲ. ಅದೇ ರೀತಿ ಹುಣಸೂರಿನಲ್ಲಿ 14,079 ಹೆಕ್ಟೇರ್‌ಗೆ ನೀರಾವರಿಯಾಗುತ್ತದೆ. ಅಲ್ಲಿ ಕೂಡ ಏತನೀರಾವರಿ ಯೋಜನೆ ಇಲ್ಲ. ಸಣ್ಣ ನೀರಾವರಿ ಆಚ್ಚುಕಟ್ಟುನಿಂದ ಹುಣಸೂರಿನಲ್ಲಿ ಸುಮಾರು 1053 ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿಯಾಗುತ್ತದೆ. ಆದರೆ ಕೊಡಗಿಗೆ ಇದರಿಂದ ಯಾವುದೇ ಪ್ರಯೋಜನವಾಗಲಿಲ್ಲ. ಕೊಡಗಿಗೋಸ್ಕರವಾಗಿ ಚಿಕ್ಕಳಿಹೊಳೆ ಎನ್ನುವ ಒಂದು ಅಣೆಕಟ್ಟನ್ನು ಕಟ್ಟಲಾಯಿತು. ಅದಕ್ಕೆ ಸುಮಾರು 10 ಕೋಟಿ ರೂಪಾಯಿಗಳ ಅಂದಾಜು ಮಾಡಿದ್ದರು ಅಂತ ನಾನು ಕೇಳಿದ್ದೆ. ಆದರೆ ನನ್ನ ಹತ್ತಿರ ಸರಿಯಾದ ಮಾಹಿತಿ ಇಲ್ಲ. ಅದಕ್ಕೆ ಇದುವರೆಗೂ 1647.79 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಯಿತು. ಆದರೂ ಸಹ ಆ ನೀರನ್ನು ಇದುವರೆಗೂ ಯಾರೂ ಉಪಯೋಗ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇಲ್ಲಿ ಇನ್ನೂ ನಾಲೆಯ ಕೆಲಸ ಸಂಪೂರ್ಣವಾಗಲಿಲ್ಲ. ಯಾರೋ ಒಬ್ಬ ರಾಜಕೀಯ ದುರೀಣರಿಂದ ಇದು ತಡವಾಗುತ್ತಿದೆ ಎನ್ನುವ ಉತ್ತರವನ್ನು ಸಹ ನನಗೆ ಕೊಟ್ಟಿದ್ದಾರೆ. ಸುಮಾರು 300 ಮೀಟರ್‌ಗಳಷ್ಟು ಕಾಲುವೆಯನ್ನು ಇವತ್ತಿನವರೆಗೂ ತೆಗೆಯಲಿಲ್ಲ. ಸುಮಾರು 16 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ

ಸಾರ್ವಜನಿಕರಿಗೆ ಉಪಯೋಗವಾಗಲಿಲ್ಲ 300 ಮೊಟರ್ ನಾಲೆಯನ್ನು ತೆಗೆಯುವುದಕ್ಕೆ ಆಗಲಿಲ್ಲ. ಈ ವಿಷಯವನ್ನು ನಾನು ಕಳೆದ 6 ವರ್ಷಗಳಿಂದ ಈ ಸದನದಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಆದರೂ ಕೂಡ ಇವತ್ತಿನವರೆಗೂ ಆ ನಾಲೆಯನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇವತ್ತಿಗೂ ಅಧಿಕಾರಿಗಳು ನಿದ್ರೆಹೊಡೆಯುವಂತಹ ಪರಿಸ್ಥಿತಿಯಲ್ಲಿದ್ದಾರೆ. ಈ ಸ್ಥಿತಿಯಲ್ಲಿ ಈ ಸರ್ಕಾರ ಇದೆ. ಮಾನ್ಯ ಅಧ್ಯಕ್ಷರೇ ನಮ್ಮಲ್ಲಿ ಕಾಡಾನೆ ಹಾವಳಿ ಜಾಸ್ತಿ ಇದೆ. ಈ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಪ್ರಶ್ನೆ ಸಂಖ್ಯೆ 173. ಆ ಪ್ರಶ್ನೆಗೆ ಉತ್ತರ ಬಂತು. ಈ ಕಾಡಾನೆಯ ಹಾವಳಿಯಿಂದ ಮಾನವನ ಹತ್ಯೆಯಾಗಿದ್ದರೂ ಕೂಡ ಇದುವರೆವಿಗೂ ಪರಿಹಾರ ಕೊಟ್ಟಿಲ್ಲ. ಪರಿಹಾರ ಕೊಡುವುದಕ್ಕೆ ಸುಮಾರು 13 ಲಕ್ಷ ರೂಪಾಯಿಗಳು ಬಾಕಿ ಇದೆ. ನಮ್ಮಲ್ಲಿ ಮೊನ್ನೆ ಹೆಚ್ಚು ಮಳೆ ಬಂತು. ನಮ್ಮಲ್ಲಿ ಕೆಲವು ಜಾಗಗಳು ಇವೆ. ಸೋಮವಾರಪೇಟೆ ತಾಲ್ಲೂಕಿನಲ್ಲಿ 4 ಪಂಚಾಯತಿಗಳು ನೀರು ಇಲ್ಲದಂತಹ ಪಂಚಾಯತಿಗಳು. ನಾನು ಕಳೆದ ಸರ್ಕಾರದಲ್ಲಿ ನೀರಾವರಿ ಸಚಿವರಾಗಿದ್ದ ನಾಗೇಗೌಡರನ್ನು ಕೇಳಿಕೊಂಡು ಹಾರಂಗಿಯಿಂದ ಒಂದು ಏತ ನೀರಾವರಿಯನ್ನು ಕೊಡಿ ಅಂತ. ಅವರು ಅದನ್ನು ಹೈ ಪವರ್ ಕಮಿಟಿ ಮುಂದೆ ತಂದರು. ಅಷ್ಟರಲ್ಲಿ ಆ ಸರ್ಕಾರ ಹೋಯಿತು. ಇಲ್ಲದಿದ್ದರೆ ಆ ಕೆಲಸ ಆಗುತ್ತಿತ್ತೋ ಏನೋ ತಮ್ಮ ಸರ್ಕಾರ ಆ ಪಂಚಾಯತಿಗಳಿಗೆ ನೀರು ಕೊಡುವಂತಹ ಕೆಲಸವನ್ನು ಮಾಡಬೇಕೆಂದು ಹೇಳುತ್ತಾ, ನಮ್ಮ ತಾಲ್ಲೂಕಿನಲ್ಲಿ ಅತಿವೃಷ್ಟಿ ಆಯಿತು. ಆ ಅತಿವೃಷ್ಟಿಯಲ್ಲಿ ತಾಕೇರಿ ಎಸ್ ಶಿವಪ್ಪ ಎನ್ನುವವರ ಗದ್ದೆ ಮಳೆಯಿಂದ 3 ಎಕರೆ ಬೆಳೆ ಕೊಚ್ಚಿ ಹೋಯಿತು. ಈ ಬೆಳೆಹಾನಿಯನ್ನು ಗುರುತು ಮಾಡಲು ರೆವಿನ್ಯೂ ಇಲಾಖೆಯ ಅಧಿಕಾರಿಗಳು ಜೀಪ್ ಮಾಡು ಅಂತ ಹೇಳಿದರು. ಆತ ಜೀಪ್ ಮಾಡಿಕೊಂಡು ವಿಲೇಜ್ ಆಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ ಅನ್ನು ಕರೆದುಕೊಂಡು ಹೋದ. ಅದಕ್ಕೆ ಬಾಡಿಗೆ ಅಂತ ಹೇಳಿ 500 ರೂಪಾಯಿ ಕೊಟ್ಟ. ಇದಾದ ನಂತರ ಅತ್ತ ತಹಶೀಲ್ದಾರರನ್ನು ಭೇಟಿ ಮಾಡಿ, ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಕಡೆಯದಾಗಿ 4 ತಿಂಗಳ ನಂತರ ಆತನಿಗೆ ಪರಿಹಾರ ಸಿಕ್ಕಿತು. ಆ ಪರಿಹಾರದ ಮೊತ್ತ ಎಷ್ಟು ಗೊತ್ತೆ ಸ್ವಾಮಿ ಕೇವಲ 100 ರೂಪಾಯಿ. ಆ ಚಿಕ್ಕನ್ನು ನಾನು ತಮ್ಮ ಮೂಲಕ ಮಾನ್ಯ ಕಂದಾಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ. 10 ಸಾರಿ ಸುತ್ತಾಡಿ, ಅಧಿಕಾರಿಗಳನ್ನು ಜೀಪ್‌ನಲ್ಲಿ ಕರೆದುಕೊಂಡು ಹೋಗಿದ್ದಕ್ಕೆ 500 ರೂಪಾಯಿಗಳು ಖರ್ಚು ಮಾಡಿ ಸಿಕ್ಕಿದ ಪರಿಹಾರ 100 ರೂಪಾಯಿ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ಇಲ್ಲೇ ಇದ್ದಾರೆ. ಮಳೆ, ನೆರೆಹಾವಳಿಯಿಂದ ನಷ್ಟಕ್ಕೆ ಗುರಿಯಾದರೆ ನೆರೆ ಹಾವಳಿ ಪರಿಹಾರ ಕಾರ್ಯ ತೆಗೆದುಕೊಳ್ಳುವುದಕ್ಕೆ ತಾಲ್ಲೂಕು ಮಟ್ಟದ ಸಮಿತಿ ಇದೆ. ಅದಕ್ಕೆ ಶಾಸಕರು ಅಧ್ಯಕ್ಷರು ಪರಿಹಾರ ಕೊಡುವುದಕ್ಕೆ ನಿಯಮಗಳು ಇವೆ. ಆ ಪ್ರಕಾರ ಕೊಟ್ಟಿದ್ದಾರೆ. ಈ ನಿಯಮ ನಾವು ಮಾಡಿದ್ದು ಅಲ್ಲ. ಮಾಜಿ ಕೃಷಿ ಸಚಿವರು ಇದ್ದಾರಲ್ಲ ಅವರು ಮಾಡಿದ್ದು ಅವರೇ ಹೇಳಬೇಕು. ಏನು ಸ್ಕೇಲ್ ಇದೆ ಆ ಪ್ರಕಾರ ಮಹಜರ್ ಮಾಡಿರುತ್ತಾರೆ. ಆ ಪ್ರಕಾರ ಪರಿಹಾರ ಕೊಟ್ಟಿರುತ್ತಾರೆ.

ರೆವಿನ್ಯೂ ಆಫೀಸರ್‌ನ್ನು ಕಾರ್‌ನಲ್ಲಿ ತಮ್ಮ ಸ್ಥಳಕ್ಕೆ ಕರೆದುಕೊಂಡು ಹೋಗುವ ರೈತರು ಬಡವರಾಗುತ್ತಾರೆಯೇ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ನಮ್ಮ ಅಧಿಕಾರಿಗಳು ನಮ್ಮನ್ನು ಆ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ. ಕಾರ್‌ನಲ್ಲಿ ಕರೆದುಕೊಂಡು ಹೋಗಬೇಕು, ಊಟ:ತಿಂಡಿಗಳನ್ನು ಕೊಡಿಸಬೇಕು, ಅವರನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವ ಜವಾಬ್ದಾರಿಯನ್ನು ರೈತರಿಗೆ ವಹಿಸಿಬಿಡುತ್ತಾರೆ.

ಇವೊತ್ತು ನಮ್ಮ ಕಾಫಿ ಬೆಳೆಗಾರರ ಸ್ಥಿತಿ ಬಹಳ ಕಷ್ಟಕರವಾಗಿದೆ. ಅವರು ಬೆಳೆದ ಕಾಫಿಗೆ ಅರ್ಧ ಬೆಲೆ ಕೂಡ ಇವೊತ್ತು ಸಿಗುತ್ತಾ ಇಲ್ಲ. 50 ಕೆ.ಜಿ. ಮೂಟೆಗೆ 6 ಸಾವಿರ ರೂಪಾಯಿಗಳ ತನಕ ಬೆಲೆ ಇದ್ದುದು ಇವೊತ್ತು 2,800 ರೂಪಾಯಿಗಳಿಗೆ ಇಳಿದಿದೆ. ತಾವುಗಳು ಬೆಳೆದ ಕಾಫಿಯನ್ನು ಮಾರಿದರೂ ಮಾಡಿದ ಸಾಲವನ್ನು ಕೊಡಲು ಸಾಧ್ಯವಾಗುತ್ತಿಲ್ಲ. ನಮ್ಮ ಕಾಫಿ ಬೆಳೆಗಾರರನ್ನು ದೊಡ್ಡ ಬೆಳೆಗಾರರು, ಸಣ್ಣ ಬೆಳೆಗಾರರು ಎಂದು ಬೇರ್ಪಡಿಸಬೇಡಿ. ನಮ್ಮ ಕೊಡಗಿನ ಕಾಫಿ ಬೆಳೆಗಾರರು ಸಾಲವನ್ನು ಮನ್ನಾ ಮಾಡಿ ಎಂದು ಕೇಳುವುದಿಲ್ಲ. ಸಹಕಾರ ಸಂಘಗಳಲ್ಲಿ ಮಾಡಿದ ಸಾಲದ ಬಡ್ಡಿಯನ್ನಾದರೂ ಕಡಿಮೆ ಮಾಡಿಸುವಂಥ ಕೆಲಸವನ್ನು ದಯವಿಟ್ಟು ಮಾಡಬೇಕು. ಇಲ್ಲವಾದಲ್ಲಿ ಬೆಳೆಗಾರರು ಬಹಳ ಸಂಕಷ್ಟಕ್ಕೆ ಸಿಲುಕಿ ಮುಂದುವರಿಯದಂತೆ ಆಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಲೆನಾಡು ಪ್ರದೇಶದಿಂದ ಬರುತ್ತಿದ್ದಾರೆ. ಈ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಕಾಫಿ ಬೆಳೆಯ ಬೆಲೆಯು ಕುಸಿದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಬೆಳೆಗಾರರ ಪರಿಸ್ಥಿತಿಯನ್ನು ಕೂಡ ನಾವು ಅರಿತುಕೊಂಡಿದ್ದೇವೆ. ಇದು ನ್ಯಾಷನಲ್ ಲಿಬರಲ್ ಪಾಲಿಸಿಯಿಂದ ಉಂಟಾದ ಪರಿಸ್ಥಿತಿ. ಆದ್ದರಿಂದ ರಾಷ್ಟ್ರಮಟ್ಟದಲ್ಲಿ ಈ ಬಗ್ಗೆ ನಿಮ್ಮವರು ಯಾರಾದರೂ ಸ್ವಲ್ಪ ಚಿಂತನೆ ಮಾಡಿದರೆ ಬೆಳೆಗಾರರಿಗೆ ಏನಾದರೂ ಅನುಕೂಲ ಒದಗುತ್ತದೆ. ಆದ್ದರಿಂದ ತಮ್ಮ ಒತ್ತಾಯವನ್ನು ಕೇಂದ್ರ ಸರಕಾರಕ್ಕೆ ತಂದು ಕಾಫಿ ಬೆಳೆಗಾರರಿಗೆ ಸ್ವಲ್ಪ ಶಕ್ತಿ ತಂದು ಕಾಫಿ ಬೆಳೆಗಾರರನ್ನು ಉಳಿಸುವ ಕೆಲಸವನ್ನು ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರಗಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಮನಮೋಹನ್ ಸಿಂಘ್‌ರವರು ಆಗ ಹೋಗಿ ಸಹಿ ಮಾಡಿ ಬಂದರಲ್ಲ? ತದನಂತರ ಎಲ್ಲರೂ ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಕಳೆದುಕೊಂಡು ಬಿಟ್ಟಿದ್ದಾರೆ. ಈಗ ಎಲ್ಲಾ ಹಾಳಾಗಿ ಹೋಗಿದೆ. ಆಗ ನಾವೇನೂ ಮಾಡುವ ಸ್ಥಿತಿಯಲ್ಲಿಲ್ಲ. ಒಂದೊಂದು ಸರಕಾರ ಬಂದಾಗಲೆಲ್ಲ ಒಂದೊಂದು ಪಾಲಿಸಿ ಮಾಡುವುದಕ್ಕಾಗುವುದೆ?

ಶ್ರೀ ಕಾಗೋಡು ತಿಮ್ಮಪ್ಪ: ನೀವು ಈಗ ಅದನ್ನು ತೆಗೆದುಹಾಕಬಹುದಲ್ಲವೆ? ನಿಮಗೆ ಅದರಿಂದ ಆದ ಅನುಕೂಲಗಳು ಎಲ್ಲವೂ ಬೇಕು. ಆದರೆ ಈಗ ಸಹಿ ಹಾಕಿ ಬಂದರು ಅನ್ನುತ್ತೀರಿ?

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೇ, ಮೊನ್ನೆ ಒಂದನೇ ತಾರೀಖಿನಿಂದ ಇಂಪೋರ್ಟ್:ಎಕ್ಸ್‌ಪೋರ್ಟ್ ಪಾಲಿಸಿ ಬಂದಿದೆ. ಅದರಲ್ಲಿ 814 ಕೃಷಿ ಉತ್ಪನ್ನಗಳು ಸಹಿತ ಅಂದರೆ ಕಾಫಿ, ಏಲಕ್ಕಿ, ಅಡಿಕೆ, ಹಂದಿ ಮಾಂಸ, ಕೋಳಿ ಮಾಂಸ, ಕುರಿ ಮಾಂಸ ಮುಂತಾಗಿ ಎಲ್ಲವನ್ನೂ ಮುಕ್ತವಾಗಿ ಯಾರು ಬೇಕಾದರೂ ಈ ದೇಶದ ಒಳಗಡೆ ತರಿಸಿಕೊಳ್ಳಬಹುದು ಎಂಬುದಕ್ಕೆ ಕೇಂದ್ರಸರಕಾರದವರು ಮುಕ್ತವಾದ ಪರವಾನಗಿಯನ್ನು ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ನಿನ್ನೆಯ ದಿನ ಮಾನ್ಯ ಸಿಂಧ್ಯರವರು ಪರಿಸ್ಥಿತಿಯನ್ನು ಬಹಳ ಸಂಕ್ಷಿಪ್ತವಾಗಿ ಹೇಳಿದ್ದು ನಮಗೆ ಅರ್ಥವಾಗಿದೆ. ಇಲ್ಲಿ ಒಂದಲ್ಲ ಒಂದು ರೀತಿಯಲ್ಲಿ ನಾವು ಪರಿಸ್ಥಿತಿಯ ಬಲಿಪಶುಗಳಾಗಿದ್ದೇವೆ. ಈಗ ನಾವು ಅಸಹಾಯಕರಾಗಿದ್ದೇವೆ. ನಮಗೆ ಆ ಕುರಿತು ಧ್ವನಿ ಇಲ್ಲದಂತಾಗಿದೆ. ಈ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಡಿಬೇಟ್ಸ್ ನಡೆದಿದೆಯೇ? ಇಲ್ಲಿ ಡಿಬೇಟ್ಸ್ ನಡೆದಿದೆಯೇ? ಯಾವ ಶಾಸನ ಸಭೆಗಳಲ್ಲಿ ಈ ಕುರಿತು ಚರ್ಚೆಯಾಗಿದೆ? ಇರುವ ವ್ಯವಸ್ಥೆಯಲ್ಲಿ ನಾವೆಲ್ಲರೂ ಸಿಕ್ಕಿಹಾಕಿಕೊಂಡಿದ್ದೇವೆ. ಆದ್ದರಿಂದ ಈ ಬಗ್ಗೆ ಯಾರಿಗೆ ಯಾರೂ ಹೇಳುವ ಹಾಗಿಲ್ಲ. ದೇಶದಲ್ಲಿ ಕಾಂಗ್ರೆಸ್, ಬಿಜೆಪಿ, ಜನತಾದಳ ಸರಕಾರಗಳನ್ನು ಮಾಡಿದೆ. ಎಲ್ಲರೂ ಈ ವ್ಯವಸ್ಥೆಯಿಂದ ಹೊರಬರುವುದಕ್ಕೆ ಯಾವ ಪ್ರಯತ್ನವನ್ನು ಮಾಡಿಲ್ಲವೆಂದಾಗ ಸುಮ್ಮನೆ ಒಬ್ಬರನ್ನೊಬ್ಬರು ಟೀಕಿಸುವುದು ಏತಕ್ಕಾಗಿ?

ಶ್ರೀ ಸಿ.ಭೈರೇಗೌಡ: ಒಮ್ಮೆ ಇಂಥ ವಿಚಾರಕ್ಕೆ ಬಾಗಿಲು ತೆಗೆದ ಮೇಲೆ ಅರ್ಧ ಮುಚ್ಚಲು ಆಗುವುದಿಲ್ಲ. ಕಾಲು ಭಾಗ ಮುಚ್ಚಲು ಆಗುವುದಿಲ್ಲ. ಹಾಗಾಗಿ ಈ ಪರಿಸ್ಥಿತಿ ಬಂತು. ಆ ಬಾಗಿಲು ತೆಗೆದಂಥ ಪುಣ್ಯ ಕೆಲಸವನ್ನು ನಮ್ಮ ಎದುರು ಕುಂತಿರುವವರು ಸರಕಾರ ನಡೆಸುವಾಗ ಮಾಡಿದರು.

ಶ್ರೀ ಕಾಗೋಡು ತಿಮ್ಮಪ್ಪ: ನೀವು ಆ ಪುಣ್ಯದ ಕೆಲಸದ ಫಲವನ್ನು ಊಟ ಮಾಡಿದ್ದೀರಿ? ಪ್ರಸಾದವನ್ನು ಎಲ್ಲರೂ ಹಂಚಿಕೊಂಡು ತಿಂದಿದ್ದೀರಲ್ಲವೆ? ಆಗ ನಿಮಗೆ ನಾಚಿಕೆಯಾಗಲಿಲ್ಲವೆ?

ಶ್ರೀ ಸಿ. ಭೈರೇಗೌಡ: ನಿಮ್ಮ ಪುಣ್ಯ ಕೆಲಸದ ಫಲ ಪ್ರತಿಫಲ ಏನೂ ಇಲ್ಲ. ಈ ದೇಶದ ರೈತರ ಕೈಗೆ ಇವರು ಚಿಪ್ಪು ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಕಾಂಗ್ರೆಸ್ ಸರಕಾರದವರು ತಪ್ಪು ಮಾಡಿದ್ದಾರೆಂದು ಇಟ್ಟುಕೊಳ್ಳಿ. ನಿಮ್ಮ ಸರಕಾರ ಬಂದಾಗ ಅದನ್ನು ಬದಲಾವಣೆ ಮಾಡಿ ಹೊಸ ಸಿಸ್ಟಂ ತರಬಹುದಾಗಿತ್ತಲ್ಲವೆ? ಗ್ಯಾಟ್ ಬೇಡ, ಯಾವ ಅಗ್ರಿಮೆಂಟ್ ಕೂಡ ಬೇಡ, ನಮ್ಮ ದೇಶಕ್ಕೆ ಹೊರಗಿನಿಂದ ಯಾವುದೂ ಬರುವುದು ಬೇಡ ಎಂದು ಮಾಡಿಕೊಳ್ಳಬಹುದಿತ್ತಲ್ಲವೆ? ಯಾರು ನಿಮಗೆ ಬೇಡವೆಂದರು?

: ಗೊಂದಲ :

ಶ್ರೀ ಕೆ. ಶ್ರೀನಿವಾಸಗೌಡ (ಕುಡವನಹಳ್ಳಿ): ಈ ಕೆಲಸವನ್ನು ಕಾಂಗ್ರೆಸ್ ಸರಕಾರದವರು ಮಾಡಿದ್ದು ಮುಕ್ತ ಅವಕಾಶಕ್ಕೆ ನಮ್ಮ ಸರಕಾರ ಅಥವಾ ಇನ್ಯಾವ ಸರಕಾರ ಎಡೆಮಾಡಿಕೊಟ್ಟಿರಲಿಲ್ಲ. ರಂಗೂನ್‌ನಿಂದ ಆಲೂಗಡ್ಡೆ ಬಿತ್ತನೆ ಬೀಜ ಸಿಗುತ್ತದೆ ಅದನ್ನು ನಮಗೆ ಒದಗಿಸಿಕೊಡಿ ಎಂದು ಹೇಳಲು ನಮ್ಮ ರೈತರು ಬಂದಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ: ಇದರಲ್ಲಿ ಒಬ್ಬರನ್ನೊಬ್ಬರು ದೂಷಣೆ ಮಾಡತಕ್ಕಂಥಾದ್ದು ಅನಾವಶ್ಯಕ. ಯಾವಾಗ ರಷ್ಯಾದ ಸೋವಿಯತ್ ಯೂನಿಯನ್ ಕೊಲ್ಯಾಪ್ಸ್ ಆಯಿತೋ ಆವೊತ್ತೇ ಈ ಬಾಧಕಗಳನ್ನು ನಾವು ಪ್ರಾಪ್ತಿ ಮಾಡಿಕೊಂಡಿದ್ದೇವೆ. ಇದರಿಂದ ಮುಕ್ತವಾಗಲು ಸಾಧ್ಯವಾಗದ ಸ್ಥಿತಿಯು ಇಡೀ ಜಗತ್ತಿನಲ್ಲಿಯೇ ಇದೆ. ಅಂಥ ವ್ಯವಸ್ಥೆಯು ಸೃಷ್ಟಿಯಾಗಿದೆ. ಈ ವ್ಯವಸ್ಥೆಯಿಂದ ಹೊರಬರುವ ಶಕ್ತಿ ಯಾವ ಪಾರ್ಟಿಗೆ ಇದೆ? ಎಂದು ಹೇಳಬೇಕು. ಕಾಂಗ್ರೆಸ್ ತಪ್ಪು ಮಾಡಿದೆ ಎಂದು ಇಟ್ಟುಕೊಳ್ಳಿ. ಅದನ್ನು ಸರಿಪಡಿಸುವ ಯೋಗ್ಯತೆಯು ನಿಮ್ಮಲ್ಲಿಲ್ಲವೆ?

ಶ್ರೀ ಆರಗಜ್ಞಾನೇಂದ್ರ: ನಮ್ಮ ಸಹಕಾರ ಮಂತ್ರಿಯವರು ಮಾತನಾಡಿ ಕೇಂದ್ರ ಸರಕಾರದಮರ ಮುಂದೆ ನಿಮ್ಮ ಬೇಡಿಕೆ ಇಡಿ ಎಂದು ಹೇಳಿದರು. ನಾವು ಕಾಫಿ ಬೆಳೆಗಾರರು ಸುಮಾರು 50 ಕೋಟಿ ರೂಪಾಯಿಗಳ ವರಮಾನ ತೆರಿಗೆಯನ್ನು ಕೊಡುತ್ತಿದ್ದೇವೆ. ಅಡಿಕೆ ಮುಂತಾಗಿ ಯಾವ ಬೆಳೆಗೂ ವರಮಾನ ತೆರಿಗೆ ಇಲ್ಲ. ಅದರ ಜೊತೆಗೆ ಒಂದು ಎಕರೆ ಕಾಫಿ ಭೂಮಿಗೆ 24 ರೂಪಾಯಿಗಳ ಕಂದಾಯವನ್ನು ಕೂಡ ನಾವು ಕೊಡುತ್ತೇವೆ. ಹಾಗಾದರೆ ಕರ್ನಾಟಕ ಸರಕಾರಕ್ಕೆ ಯಾವ ಹೊಣೆಗಾರಿಕೆ ಇಲ್ಲವೆ? ಸರಕಾರದವರು ಸಹಕರಿಸಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಕಾಫಿ ಬೆಳೆಯನ್ನು ಕೈಗಾರಿಕೆ ಎಂದು ಸರಕಾರ ಪರಿಗಣಿಸಿದೆ. ಅದಕ್ಕಾಗಿ ಭೂಸುಧಾರಣ ವ್ಯಾಪ್ತಿಯಿಂದ ಕಾಫಿ ತೋಟಗಳನ್ನು ಹೊರಗೆ ಇಟ್ಟಿದೆ. ಆ ಕಾರಣಕ್ಕಾಗಿ ಇಂಡಸ್ಟ್ರೀಯಲ್ ಡಿಸ್ಪ್ಯೂಟ್ ಆಕ್ಟ್‌ನ ಎಲ್ಲಾ ನಿಯಮಗಳು ಕಾಫಿ ತೋಟಕ್ಕೆ ಅನ್ವಯವಾಗುತ್ತದೆ. ಆದ್ದರಿಂದ ನಿಮಗೆ ವರಮಾನ ತೆರಿಗೆ ಬೀಳುತ್ತದೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ನಮಗೆ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಿಂದಾಗಲೀ, ಕೃಷಿ ಇಲಾಖೆಯಿಂದಾಗಲೀ ಯಾವುದೇ ಸವಲತ್ತು ಸಿಗುತ್ತಾ ಇಲ್ಲ. ನಮಗೆ ಭೂಮಿಯೂ ಅಲ್ಲ ಆಕಾಶವೂ ಅಲ್ಲ ಎಂಬಂತಾಗಿದೆ.

ರಾಜ್ಯಪಾಲರ ಭಾಷಣದಲ್ಲಿ ನಮ್ಮ ಯುವಕರಿಗೆ ಉದ್ಯೋಗವಿಲ್ಲದ ಪರಿಸ್ಥಿತಿಯಲ್ಲಿ ಕೊಡಗಿನಲ್ಲಿ ಮತ್ತು ರಾಜ್ಯದೆಲ್ಲೆಡೆಯಲ್ಲಿ ಹೆಚ್ಚು ಹೆಚ್ಚು ಇಂಡಸ್ಟ್ರೀಗಳನ್ನು ತೆರೆದು ಆ ಮೂಲಕ ಉದ್ಯೋಗ ದೊರಕಿಸಿಕೊಡುವ ವ್ಯವಸ್ಥೆಯನ್ನಾದರೂ ಮಾಡಬಹುದಾಗಿತ್ತು. ಆದರೆ ಅದು ಆಗಲಿಲ್ಲ. ನೆಲಮಂಗಲದ ಶಾಸಕರಾದ ಮಾನ್ಯ ಅಂಜನಮೂರ್ತಿಯವರು ಒಂದು ಪ್ರಶ್ನೆಯನ್ನು ಕೇಳಿದ್ದರು. 19 ವರ್ಷದವರು ಉದ್ಯೋಗ ಇಲ್ಲದೆ ಸುಮಾರು 3,22,655 ಜನರು ಇದ್ದಾರೆ. 20 ರಿಂದ 29 ವರ್ಷದವರು ಸುಮಾರು 9,09,768 ಜನರು ಇದ್ದಾರೆ. 30 ವರ್ಷದಿಂದ 39 ವರ್ಷದವರು 5,38,091 ಜನರು ಉದ್ಯೋಗಕ್ಕಾಗಿ ಬೇಡಿಕೆಯನ್ನು ಇಟ್ಟು ಉದ್ಯೋಗ ವಿನಿಮಯ ಕೇಂದ್ರದಲ್ಲಿ ದಾಖಲು ಮಾಡಿದ್ದಾರೆ. ಅದೇ ರೀತಿ 40 ವರ್ಷಕ್ಕೂ ಮೇಲ್ಪಟ್ಟಂಥ ಜನರು 1,06,901 ಜನರು ಉದ್ಯೋಗ ಇವತ್ತು ಸಿಗುತ್ತೆ. ನಾಳೆ ಸಿಗುತ್ತೆ ಎಂದು ಹೇಳಿ ಅವರು ಮುದುಕರಾಗುವ ಪರಿಸ್ಥಿತಿಗೆ ಬಂದಿದ್ದಾರೆ. ಮೊನ್ನೆ ಮೊನ್ನೆ ನಾನು ಕೆಲವೊಂದು ಪ್ರಶ್ನೆಯನ್ನು ಕೇಳಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ಕೋಪಿಸಿಕೊಂಡುಬಿಟ್ಟರು. ನಾನೊಬ್ಬನೇ ಪ್ರಶ್ನೆ ಕೇಳಿದ್ದಲ್ಲ. ವಾಸ್ತುವಿಗಾಗಿ ಎಷ್ಟು ಖರ್ಚು ಮಾಡಿದ್ದೀರಿ? ಪೀಠೋಪಕರಣಕ್ಕಾಗಿ ಎಷ್ಟು ಖರ್ಚುಮಾಡಿದಿರಿ? ಇದನ್ನು ನಾನೊಬ್ಬನೇ ಕೇಳಿದ್ದಲ್ಲ. ಮಾನ್ಯ ಸದಸ್ಯರಾದ ಕೆಬಿ ಮಲ್ಲಿಕಾರ್ಜುನ್, ಬೀರೂರು ಕ್ಷೇತ್ರ ಅವರು ಕೂಡ ಈ ಪ್ರಶ್ನೆಯನ್ನು ಕೇಳಿದ್ದಾರೆ. ಅದರಲ್ಲಿ ಕಚೇರಿಯ ಪೀಠೋಪಕರಣದ ವೆಚ್ಚ 44,60,023 ರೂ. ಸಚಿವರ ವಸತಿ ಗೃಹಕ್ಕಾಗಿ ನವೀಕರಣ ವೆಚ್ಚ 77,13,000 ರೂ. ಪುನಃ ಅಂದಾಜು ಪೀಠೋಪಕರಣ ಇತ್ಯಾದಿಗೆ 80,28,000 ಸಾವಿರ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ಈ ವಿಚಾರವನ್ನು ಏತಕ್ಕಾಗಿ ಹೇಳಿದೆ ಎಂದರೆ ಈ ಕರ್ನಾಟಕದ ಐದೂವರೆ ಕೋಟಿ ಜನ ತಮ್ಮ ಬಗ್ಗೆ ಏನಾದರೂ ತಿಳಿದುಕೊಳ್ಳುತ್ತಾರೆ. ಅದಕ್ಕೆ ಸರಿಯಾದ ಮಾಹಿತಿಯನ್ನು ಕೊಡಿ ಎಂದು ಕೇಳಿದೆ. ಆದರೆ ನಮಗೆ ಉತ್ತರ ಸಿಕ್ಕಿದ್ದೇ ಬೇರೆ. ಅವರು ಬೇರೆ ವಿಚಾರದಲ್ಲಿ ಉತ್ತರವನ್ನು

ಕೊಟ್ಟರು. ಆದರೂ ನಾವು ಅದನ್ನು ಕೇಳಿಕೊಂಡೆವು. ನಮಗೂ ಕೂಡ ಅದೇ ರೀತಿಯಲ್ಲಿ ಉತ್ತರ ಕೊಡುವುದಕ್ಕೆ ಬರುತ್ತದೆ. ಆದರೆ ನಾವು ಅವರ ಹಿರಿತನಕ್ಕೆ ಸುಮ್ಮನಾಗಿದ್ದೇವೆ. ನಮ್ಮ ಜಿಲ್ಲೆಯ ಮಂತ್ರಿಗಳಾದ ಸುಮಾ ವಸಂತ್‌ರವರು ಕೂಡ ಪಟ್ಟಿಯನ್ನು ಕಳುಹಿಸಿದರು. ಕೊಡಗಿನ ಬಗ್ಗೆ ಹೆಚ್ಚು ಮಾತನಾಡಿ ನೀವು ಕೊಡಗಿಗೆ ಹೆಚ್ಚು ಹಣ ಬಿಡುಗಡೆ ಮಾಡಬೇಕೆಂದು ಬೇಡಿಕೆಯನ್ನು ಇಡಿ ಎಂದು ಹೇಳಿದರು. ಅವರಿಗೂ ಕೂಡ ಗೊತ್ತಿದೆ. ಏಕೆಂದರೆ ಕೊಡಗಿನಲ್ಲಿ ಹೆಚ್ಚು ಮಳೆ ಇರುವುದರಿಂದ ಅವರ ವಿರಾಜಪೇಟೆ ತಾಲ್ಲೂಕಿನಲ್ಲಿ ರಸ್ತೆಯೂ ಇಲ್ಲ. ಕುಡಿಯುವುದಕ್ಕೆ ನೀರು ಇಲ್ಲ. ಸುಮಾರು ಹತ್ತು ಕಿಲೋಮೀಟರ್ ದೂರದಿಂದ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕಾಗುತ್ತದೆ. ನನಗೆ ಇವತ್ತು ಕೂಡ ಮಾಹಿತಿ ಸಿಕ್ಕಿದೆ. ಸುಮಾರು 152 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಎನ್ನುವ ಪಟ್ಟಿಯನ್ನು ಕೊಟ್ಟಿದ್ದಾರೆ. ನಮ್ಮ ಸನ್ಮಾನ್ಯ ಅಬ್ಕಾರಿ ಮಂತ್ರಿಗಳ್ಯಾಕೋ ಸುಮ್ಮನೆ ಕುಳಿತಿದ್ದಾರೆ. ಅವರು ಕೂಡ ಮಡಿಕೇರಿಗೆ ಹೋದಾಗ ಜನರು ಹಿಡಿದು ಗಲಾಟೆ ಮಾಡಿದ್ದನ್ನು ನಾನು ಕೂಡ ನೋಡಿದ್ದೇನೆ. ಏಕೆಂದರೆ ನೀವು ಮೂರು ಜನ ಮಂತ್ರಿಗಳಿದ್ದೀರಿ. ಆದರೂ ಕೂಡ ಕೊಡಗಿಗೆ ಹೆಚ್ಚು ಹಣ ಬಿಡುಗಡೆಯಾಗಲಿಲ್ಲವೆನ್ನುವ ಕೂಗು ಬಂದಿದೆ.

ಎಂ.ಎಂ. ನಾಣಯ್ಯ (ಅಬ್ಕಾರಿ ಸಚಿವರು): ಮಾನ್ಯ ಅಪ್ಪಚ್ಚುರಂಜನ್‌ರವರು ಗಲಾಟೆ ಮಾಡಿಸಬೇಕು ಅಷ್ಟೆ. ಇಷ್ಟರವರೆಗೂ ಗಲಾಟೆ ಆಗಿಲ್ಲ. ಸರ್ಕಾರ ತನ್ನ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಹೋಗುತ್ತಿದೆ. ಏನಾದರೂ ಇವರು ಮಾಡಿಸಬೇಕೇ ವಿನಹಾ ಇಷ್ಟರವರೆಗೆ ಮಾಡಲಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ಗಲಾಟೆ ಮಾಡಿದರು ಎಂದರೆ, ನಿಮಗೆ ಧಿಕ್ಕಾರ ಕೂಗಿ ಕಲ್ಲು ಹೊಡೆದರು ಎಂದು ಹೇಳಲಿಲ್ಲ. ನಮಗೆ ರಸ್ತೆಗೆ ಹಣ ಬೇಕು. ನಮಗೆ ಕುಡಿಯುವ ನೀರಿನ ವ್ಯವಸ್ಥೆ ಬೇಕು ಈ ರೀತಿ ಬೇಡಿಕೆ ಇಟ್ಟು ಗಲಾಟೆ ಮಾಡಿದ್ದಾರೆ ಎಂದು ಹೇಳಿದ್ದೇನೆ.

ಶ್ರೀ ಎಂ.ಎಂ. ನಾಣಯ್ಯ: ಬೇಡಿಕೆ ಇದೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ಅದನ್ನು ಹೇಳಿ. ನಿಮಗೆ ನಾನೇನು ಗಲಾಟೆ ಮಾಡಿಸುವುದಕ್ಕೆ ಹೋಗುವುದಿಲ್ಲ. ಅಂಥ ಪರಿಸ್ಥಿತಿ ಬಂದಾಗ ನೋಡಬೇಕಾಗುತ್ತದೆ.

ಶ್ರೀ ಎಂ.ಎಂ. ನಾಣಯ್ಯ: ಬೇಡಿಕೆಗೂ ಗಲಾಟೆಗೂ ಬಹಳ ವ್ಯತ್ಯಾಸವುಂಟು.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ತುಂಬಾ ಜನರು ಸೇರಿಕೊಂಡು ಒತ್ತಡ ತರುತ್ತಿದ್ದಾರೆ. ಆ ರೀತಿ ಗಲಾಟೆ. ನಾವು ಊಟ ಮಾಡುವ ಸಂದರ್ಭದಲ್ಲಿ ತಾಯಿಯ ಜೊತೆ ಊಟ ಮಾಡಿದರೂ ಒಂದೇ. ತಂದೆ ಜೊತೆ ಊಟ ಮಾಡಿದರೂ ಒಂದೇ. ಕೊಡಗಿನ ಅಭಿವೃದ್ಧಿಗೋಸ್ಕರವಾಗಿ ಹಣ ಬೇಕು ಎಂದು ಹೇಳುವ ಬೇಡಿಕೆ ನನ್ನದು. ಅದು ನಿಮ್ಮ ಮೂರು ಮಂತ್ರಿಗಳದೂ ಕೂಡ ಇದೆ. ನಮಗೆ ಮೂರು ಜನ ಮಂತ್ರಿಗಳನ್ನು ಕೊಟ್ಟಿದ್ದೀರಿ. ಆದರೆ ಅದರಲ್ಲಿ ಯಾರಿಗೂ ಕ್ಯಾಬಿನೆಟ್ ಕೊಡಲಿಲ್ಲ. ರಾಜ್ಯ ಮಂತ್ರಿಗಳನ್ನಾಗಿ ಮಾಡಿದ್ದಾರೆ. ಕ್ಯಾಬಿನೆಟ್ ಮಂತ್ರಿಗಳನ್ನಾಗಿ ಒಬ್ಬರಿಗಾದರೂ ಕೊಡಬಹುದಾಗಿತ್ತು. ಅವರಿಗೆ ಇಂಡಿಪೆಂಡೆಂಟ್ ಛಾರ್ಜ್ ಕೂಡ ಕೊಟ್ಟಿಲ್ಲವೆನ್ನುವ ಮಾತನ್ನು

ಹೇಳಿದೆ. ತಾವು ಇರಲಿಲ್ಲ. ಇದರ ಜೊತೆಗೆ ಇವತ್ತು ಕೊಡಗಿನಲ್ಲಿ ವಿದ್ಯುತ್ ಅಭಾವ ಬಹಳಷ್ಟು ಇದೆ. ಕಳೆದಸಾರಿ ಚುನಾವಣೆ ಸಂದರ್ಭದಲ್ಲಿ ನಾವು ಗ್ರಾಮಾಂತರ ಪ್ರದೇಶಕ್ಕೆ ಭೇಟಿ ಕೊಟ್ಟಾಗ ಸುಮಾರು 80ಕ್ಕಿಂತ ಹೆಚ್ಚು ವಯಸ್ಸಾದ ಜನರು ನಮ್ಮನ್ನು ಕೇಳುತ್ತಿದ್ದರು. ನಮಗೆ ಟಿ.ವಿ ನೋಡುವ ಅವಕಾಶ ಸಾಯೋ ಒಳಗಾದರೂ ಸಿಗುತ್ತಾ ಎನ್ನುವ ಪ್ರಶ್ನೆಯನ್ನು ಕೇಳುತ್ತಿದ್ದರು. ಇವತ್ತು ಕೊಡಗಿನಲ್ಲಿ ಹಳ್ಳಿಗಳಲ್ಲಿ ಕೇವಲ 50 ಪರ್‌ಸೆಂಟ್ ವಿದ್ಯುತ್ ವ್ಯವಸ್ಥೆ ಇಲ್ಲ. ಕತ್ತಲೆಯಲ್ಲಿಯೇ ಉಳಿಯುವ ಪರಿಸ್ಥಿತಿಯಲ್ಲಿ ನಾವು ಎರಡು ಸಾವಿರ ಇಸವಿಯಲ್ಲಿ ಇದ್ದೇವೆ. ಈ ರೀತಿ ಕೊಡಗಿನ ಸ್ಥಿತಿ ಇದೆ. ತಾವುಗಳೆಲ್ಲಾ ಎಚ್ಚರ ವಹಿಸಿ ಹೆಚ್ಚುಹಣ ಬಿಡುಗಡೆ ಮಾಡಿ ಕೊಡಗಿನ ಅಭಿವೃದ್ಧಿಪಡಿಸಬೇಕು. ನಮ್ಮಲ್ಲಿ ಹೆಚ್ಚು ಯೋಧರು ರಕ್ಷಣೆಗೆ ಹೋದ ಜನರು ಇದ್ದಾರೆ. ಅವರು ಈ ರಾಜ್ಯದ ಮೇಲೆ ಎದುರಿ ತಿರುಗಿ ಬೀಳುವುದು ಬೇಡವೆನ್ನುವ ಎಚ್ಚರಿಕೆಯ ಮಾತನ್ನು ಹೇಳುತ್ತಾ ನನಗೆ ಇಷ್ಟು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ. ಧನ್ಯವಾದಗಳು.

10. ಪ್ರಕಟಣೆ:

ಮಾನ್ಯ ಉಪಾಧ್ಯಕ್ಷರು:

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ, ಕರ್ನಾಟಕ ವಿಧಾನ ಪರಿಷತ್ತು ದಿನಾಂಕ:20-04-2000ದಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ, ಆಂಗೀಕರಿಸಿತೆಂದು ತಿಳಿಸುತ್ತಿದ್ದೇನೆ.

1. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2000.
2. ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕ, 2000.
3. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ತಿದ್ದುಪಡಿ) ವಿಧೇಯಕ, 2000.

11. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

+ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ, ಹೊಸ ಸರ್ಕಾರ ಆಡಳಿತಕ್ಕೆ ಬಂದು ಈಗಾಗಲೇ ಆರು ತಿಂಗಳು ಕಳೆದಿದೆ. ಪಾರದರ್ಶಕ ಸರ್ಕಾರವನ್ನು ನೀಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಘೋಷಣೆಯನ್ನು ಮಾಡಿದ್ದಾರೆ. ಯಾವುದೇ ಕಡತಗಳು 15 ದಿನಗಳ ಮೇಲೆ ಇಲಾಖೆಯಲ್ಲಿ ಉಳಿಯುವುದಿಲ್ಲ ಎನ್ನುವ ವಿಚಾರವನ್ನು ಕೂಡ ಆಡಳಿತಕ್ಕೆ ಬಂದ ಹೊಸದರಲ್ಲಿ ಈ ಸರ್ಕಾರ ಹೇಳುತ್ತಾ ಬಂದಿದೆ.